ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ವೀನುಗಾರಿಕೆ ಹಾಗೂ ಪಶು ಪಾಲನೆ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

ಅ) ಕಾವೇರಿ ನೀರು ಸರಬರಾಜು ಯೋಜನೆ ಹಿನೇ ಹಂತದ ಪ್ರಥಮ ಹಂತದ ಕೆಲಸಗಳು ಮುಗಿದಿವೆ. ಬೃಹತ್ ಕಾವೇರಿಗಳಿಗಾಗಿ ಕೊಳವೆಗಳನ್ನು ಹಾಕುವಿಕೆ ನೀರಿನ ತುದ್ದೀಕರಣ ಘಟಕಗಳ ನಿರ್ಮಾಣ ಮುಂತಾದ ಕಾರ್ಯಗಳು ಭರದಿಂದ ಸಾಗಿವೆ.

ಆ) ಈ ಯೋಜನೆಗೆ ಹಣ ಕ್ರೋಢೀಕರಣದ ಮೂಲಗಳಲ್ಲಿ ಪ್ರಾರಂಭದಲ್ಲಿ ವಿಳಂಬವಾಗಿದೆ.

ಇ) ಮುಖ್ಯವಾಗಿ ನಗರದ ದಕ್ಷಿಣ ಮತ್ತು ಪೂರ್ವ ಭಾಗಗಳಿಗೆ ಕಾವೇರಿ ಮೂಲದಿಂದ ಸರಬರಾಜು ಮಾಡುವ ಯೋಜನೆ ಇದೆ. ಆದಾಗ್ಯೂ ತಿಪ್ಪಗೊಂಡನಹಳ್ಳಿ ಮತ್ತು ಹೆಸರಘಟ್ಟ ಜಲಾಶಯಗಳಲ್ಲಿ ಮಳೆಯು ಬಾರದೆ ನೀರಿನ ಕೊರತೆಯಾದಲ್ಲಿ, ಕಾವೇರಿ ಮೂಲದಿಂದ ಬರುವ ನೀರನ್ನು ನಗರದ ಉತ್ತರ ಮತ್ತು ಪಶ್ಚಿಮ ಭಾಗಗಳಿಗೂ ಸಹ ಸರಬರಾಜು ಮಾಡುವ ಕಾರ್ಯಕ್ರಮ ನಡೆಯುತ್ತಿದೆ.

ಈ) ಈ ಯೋಜನೆಯ ಒಟ್ಟು ಅಂದಾಜು ವೆಚ್ಚ ೨೪೦ ಕೋಟಿ ರೂ.ಗಳು ಇದ್ದು ನೇ ವಿಪ್ರಿಲ್ ಮಾಹೆಯ ಅಂತ್ಯದವರೆಗೆ ೧೦೪.೧೮ ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ತಮ್ಮ ಜೊತೆಯಲ್ಲಿ ಈಗಾಗಲೇ ನಾನು ಮತ್ತು ಆಡಳಿತ ಪಕ್ಷದ ಕೆಲವು ಸದಸ್ಯರು ಸಹ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ದಯವಿಟ್ಟು ಅದನ್ನು ಮಂಡನೆ ಮಾಡುವುದಕ್ಕೆ ಅನುಮತಿ ಕೊಡಬೇಕೆಂದು ಕೋರುತ್ತೇನೆ. ಶಿಕ್ಷಣ ಸಚಿವರು ಇಲ್ಲೇ ಇರುವುದರಿಂದ ಅವರಿಂದ ಒಂದು ಹೇಳಿಕೆ ಬಯಸುತ್ತೇನೆ ಕಳೆದ ಒಂದು ವಾರದಿಂದ...

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ವಿಧಾನಸಭೆ ಹೊರಗಡೆ ನಾವು ಧರಣಿ ಕುಳಿತಿದ್ದಾಗ ನಮ್ಮನ್ನು ಯಾರೂ ಬಂದು ಕೇಳಿ ಎಂದು ಹೇಳಲಿಲ್ಲ. ಈಗ ವಿಧಾನಸಭೆ ಒಳಗಡೆ ಧರಣಿ ಕುಳಿತಿದ್ದೇವೆ. ಧರಣಿ ಕುಳಿತಿರುವ ಉದ್ದೇಶ ಏನು? ಒಂದು ಕೋಟಿ ಜನ ರೈತರಿಗೆ ಅನ್ಯಾಯವಾಗಿದೆ. ಸರ್ಕಾರ ನಮ್ಮ ವಾದವನ್ನು ಒಪ್ಪಿಕೊಳ್ಳದಿದ್ದರೆ, ತಮಗೂ ಅದು ಸರಿ ಎನ್ನಿಸದಿದ್ದರೆ.....

SRI QUMURAL ISLAM.—Sir, I have also given a

ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯ
ರೈತರ ಸಾಲವನ್ನು ಮನ್ನಾ ಮಾಡುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ.— ಒಂದು ಕೋಟಿ ಜನ ರೈತರಿಗೆ ಅನ್ಯಾಯವಾಗಿದೆ.

ಅಧ್ಯಕ್ಷರು.— ಮಾನ್ಯ ಬಿ. ಜೆ. ಪಿ. ಪಕ್ಷದ ನಾಯಕರು ಮುಖ್ಯ ಅವರ ಸ್ಥಾನಕ್ಕೆ ಬಂದು ಈಗ ಚರ್ಚೆ ಪ್ರಾರಂಭ ಮಾಡಿದ್ದಾರೆ. ನಿಮ್ಮ ಮುಂದೆ ಇರತಕ್ಕ ಆಪ್ಷನ್ಸ್ ಎರಡು. ಒಂದು, ಧರಣಿ ಮುಂದುವರೆಸಬೇಕು ಎಂದರೆ ಧರಣಿ ಮುಂದುವರಿಸುವುದಕ್ಕೆ ನೀವು ಸರ್ವತಂತ್ರ ಸ್ವತಂತ್ರರು. ಇಲ್ಲವೇ ವಿಧಾನಸಭಾ ಸದಸ್ಯರಾಗಿ ನಿಮ್ಮ ಕಾರ್ಯನಿರ್ವಹಣೆಯನ್ನು ಮಾಡುತ್ತೇವೆಂಬುದು ನಿಮ್ಮ ನಿರ್ಧಾರವಾದರೆ ನಿಮ್ಮ ಸ್ಥಾನಕ್ಕೆ ಬಂದು ಮಾತನಾಡಬಹುದು. ನೀವು ಒಂದು ಗಂಟೆ ಅಲ್ಲಿ ಕೂಳಿತು (ಧರಣಿ) ಎರಡು ನಿಮಿಷದಲ್ಲಿ ತಮ್ಮ ಸ್ಥಾನಕ್ಕೆ ಬಂದು ಮಾತನಾಡಿ ಪುನಃ ಧರಣಿ ಸ್ಥಳಕ್ಕೆ ಹೋಗುತ್ತೇನೆ ಎಂಬುದು ಯೋಚಿತವೇ ಎಂದು ತಾವೇ ಗಂಭೀರವಾಗಿ ಆಲೋಚನೆ ಮಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಸನ್ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಟ್ಟರೆ ಹೇಳುತ್ತೇನೆ. ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೇನೆಂದರೆ...

ಶ್ರೀ ಕೆ. ಲಕ್ಕಪ್ಪ.— ಅಧ್ಯಕ್ಷರೇ, ಅಸೆಂಬ್ಲಿಯಲ್ಲಿ ಯಾವಾಗಲೂ ಧರಣಿ ಎಂದರೆ ಅವಕ್ಕೆ ಸಹಾಯ...

ಶ್ರೀ ಬಿ. ಎಸ್. ಯಡಿಯೂರಪ್ಪ.— ರಾಜ್ಯಸಭೆಯಲ್ಲಿ ಯಾವರೀತಿ ಕೆಲಸ ಮಾಡುತ್ತಿದ್ದಾರೆ, ಲೋಕಸಭೆಯಲ್ಲಿ ಯಾವರೀತಿ ಕೆಲಸ ಮಾಡುತ್ತಿದ್ದಾರೆ ಅವರು ಎಂಬ ವಿವರಕ್ಕೆ ನಾನು ಹೋಗುವುದಿಲ್ಲ,

ಶ್ರೀ ಕೆ. ಲಕ್ಕಪ್ಪ.— ಬೆಳಿಗ್ಗೆಯಿಂದ ಸಂಜೆಯವರೆಗೂ ಧರಣಿ ಮಾಡಿದರೆ ಅಸೆಂಬ್ಲಿ ನಡೆಸುವುದಂ ಹೇಗೆ ?

ಅಧ್ಯಕ್ಷರು,— ನಡೆಸುತ್ತಿದ್ದೇವಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.— ವಿಧಾನಸಭೆ ಹೊರಗಡೆ ನಾನು ಧರಣಿ ಕುಳಿತಾಗ ನನ್ನನ್ನು ಕೇಳಬೇಕಂ ಎಂದು ಯಾರನ್ನು ನಾನು ಅಪೇಕ್ಷೆ ಮಾಡಲಿಲ್ಲ. ಸರ್ಕಾರಕ್ಕೆ ಒತ್ತಾಯ ಮಾಡಲು ನನಗೆ ಅಧಿಕಾರ ಇಲ್ಲ.

ಅಧ್ಯಕ್ಷರು.— ಅಧಿಕಾರ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ನಮ್ಮ ಇತಿಮಿತಿಯಲ್ಲಿ ಒತ್ತಾಯ ಮಾಡಿದ್ದೇವೆ. ರೈತರ ಸಾಲ ಮನ್ನಾ ಬಗ್ಗೆ ಕೇಂದ್ರಸರ್ಕಾರ ಒಂದು ಯೋಜನೆ ಕಳುಹಿಸಿಕೊಟ್ಟಿದೆ. ಬೇರೆ ಬೇರೆ ರಾಜ್ಯ ಸರ್ಕಾರಗಳು ಅದರ ಸಾಧಕಬಾಧಕಗಳ ಬಗ್ಗೆ ವಿಮರ್ಶೆ ಮಾಡಿ ಬೇರೆ ಒಂದು ಯೋಜನೆಯನ್ನು ಕಳುಹಿಸಿಕೊಟ್ಟಿದ್ದಾರೆ ಸನ್ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರವನ್ನು ನಾನು ಒತ್ತಾಯ ಮಾಡುತ್ತಾ ಇರುವುದು ಏನೆಂದರೆ, ಈ ಯೋಜನೆಯಿಂದ ನಮ್ಮ ರಾಜ್ಯದ ರೈತರಿಗೆ ಅನ್ಯಾಯವಾಗುತ್ತದೆ. ದಿನಾಂಕ ೨-೧೦-೮೯ರಲ್ಲಿ ಡಿಫಾಲ್ಟರ್ ಎಂದರೆ ಅದು ಕನ್‌ವರ್ಷನ್ ಆಗಿರುವುದರಿಂದ ಸಹಕಾರ ಸಂಘದಿಂದ ಸಾಲ ಪಡೆಯವವರಿಗೆ ಅನುಕೂಲ ಆಗುವುದಿಲ್ಲ, ರೈತರಿಗೆ ಸವಲತ್ತು ಸಿಗುವುದಿಲ್ಲ. ಕೇಂದ್ರ ಸರ್ಕಾರ ಮೊದಲು ೧೦ ಸಾವಿರ ರೂಪಾಯಿವರೆಗೆ ಸಾಲ ಮನ್ನಾ ಮಾಡುತ್ತೇವೆಂದು ಹೇಳಿ ಈಗ ಬಡ್ಡಿ ಸೇರಿ ಎಂದು ಹೇಳಿದೆ. ಬ್ಯಾಂಕಿನಲ್ಲಿ ಸಾಲ ಪಡೆಯುವವರಿಗೆ ಐದು ಪರ್ಸೆಂಟೂ ಲಾಭ ಆಗುವುದಿಲ್ಲ. ರಾಜ್ಯ ಸರ್ಕಾರದಿಂದ ೧೨೦ ಕೋಟಿ ಭಾರ ಬಿದ್ದರೂ ಮನ್ನಾ ಮಾಡುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದರಿಂದ ರೈತರ ೨೫ ಕೋಟಿ ರೂಪಾಯಿ ಸಾಲ ಮನ್ನಾ ಆಗುವುದಿಲ್ಲ. ಆದ್ದರಿಂದ ಈ ಸಭೆಯಲ್ಲಿ ಒಂದು ರೆಸಲ್ಯೂಷನ್ ಮಾಡಿ ಕಳುಹಿಸಿಕೊಡೋಣ.

ಶ್ರೀ ಕೆ. ಲಕ್ಕಪ್ಪ.— ಅವರು ಒಂದೇ ಪಿಟೀಲು ಬಾರಿಸುತ್ತಿದ್ದಾರೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದವರು ರಿಯಾಯಿತಿ ಕೊಟ್ಟರೆ ನಾವು ಸಾಲ ವಜಾ ಮಾಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಕೇಂದ್ರ ಸರ್ಕಾರದ ಮೇಲೆ ಅವರು ಒತ್ತಾಯ ತರಬಹುದು ಏತಕ್ಕೆಂದರೆ ಅಲ್ಲಿ ಜಂಟಿ ಸರ್ಕಾರ ನಡೆಯುತ್ತಿದೆ. ಆದ್ದರಿಂದ ಈ ವಿಷಯವನ್ನು ಇಲ್ಲಿಗೇ ಬಿಟ್ಟು ವಿಧಾನಸಭೆಯಲ್ಲಿ ಬೇರೆ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಸದಸ್ಯರನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.— ಮಾನ್ಯ ಯಡಿಯೂರಪ್ಪನವರು ಮೊನ್ನೆ ನಡೆದ ಚರ್ಚೆಯಲ್ಲೂ ಈ ದಿನ ಪ್ರಸ್ತಾಪ ಮಾಡಿದ ವಿಚಾರಗಳನ್ನೇ ಪ್ರಸ್ತಾಪ ಮಾಡಿದ್ದಾರೆ. ಕೇಂದ್ರ ಸರ್ಕಾರ ಕೃಷಿಕರಿಗೆ ಪರಿಹಾರ ನೀಡುವುದರಲ್ಲಿ ಏನು ಯೋಜನೆ ತಂದಿದೆ ಎಂದು ಹೇಳಿದೆ. ಆದನ್ನು ನಾವೆಲ್ಲಾ ನೋಡಿದ್ದೇವೆ. ಆ ಯೋಜನೆ ಪ್ರಕಾರ ಯಾವ ರೈತರಿಗೂ ಸಹಾಯ ಸಿಗುವುದಿಲ್ಲವೆಂದು ಮಾನ್ಯ ಯಡಿಯೂರಪ್ಪನವರ ಅಭಿಪ್ರಾಯ. ಅದರ ಬಗ್ಗೆ ನಮ್ಮ ಭಿನ್ನಾಭಿಪ್ರಾಯ ಇಲ್ಲ. ಕೇಂದ್ರ ಸರ್ಕಾರ ವಿಚಾರ ಮಾಡಿರತಕ್ಕ ಯೋಜನೆಯಲ್ಲಿ ಲೋಪ ಇದ್ದರೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಮಾನ್ಯ ಸದಸ್ಯರು ಪ್ರತ್ಯೇಕವಾದ ಒಂದು ಪ್ರಸ್ತಾಪವನ್ನು ತಿಳುಹಿಸಲಿ. ನಾವು ಅದರ ಬಗ್ಗೆ ವಿಶೇಷವಾಗಿ ಚರ್ಚೆಯಲ್ಲಿ ಭಾಗವಹಿಸುತ್ತೇವೆ. ನಮ್ಮ ಸಲಹೆಗಳನ್ನೂ ಸಹಾ ಕೊಡುತ್ತೇವೆ ಏಕೆಂದರೆ ಕೇಂದ್ರ ಸರ್ಕಾರದ ನಾಲ್ಕು ಕಾಲುಗಳಲ್ಲಿ ಬಿಜೆಪಿ ಪಕ್ಷದವರು ಒಂದು ಕಾಲು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.— ಆ ಒಂದು ಕಾಲು ಎಳೆದುಬಿಟ್ಟರೆ ಬಿದ್ದು ಹೋಗುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.— ಕೇಂದ್ರದಲ್ಲಿ ಎಲ್ಲವನ್ನೂ ನಿಮ್ಮ ಕೈನಲ್ಲೆ ಇಟ್ಟುಕೊಂಡು ಇಲ್ಲಿ ನಮ್ಮನ್ನು ಹಿಡಿದು ಎಳೆಯುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಕೇಂದ್ರ ಸರ್ಕಾರದ ಯೋಜನೆ ಏನಿದೆ ಅದು ತಪ್ಪಿದೆ. ಆದರಿಂದ ಖಂಡಿತವಾಗಿಯೂ ಯಾವ ರೈತರಿಗೂ ಸಹಾಯವಾಗುವುದಿಲ್ಲ. ನಾನು ಅದನ್ನು ಓದಿದ್ದೇನೆ. ಅದು ಬರೀ ಕಣ್ಣೊರೆಸತಕ್ಕ ರೀತಿಯಲ್ಲಿ ಇದೆ. ದುರಂಹಿಟ್ಟು ಅವರು ಒಂದು ಪ್ರಸ್ತಾಪ ಮಂಡಿಸಲಿ. ತಿದ್ದುಪಡಿ ಮಾಡುವುದಕ್ಕೆ, ಬದಲಾವಣೆ ಮಾಡುವುದಕ್ಕೆ ಸೂಕ್ತ ಸಲಹೆಯನ್ನು ರಾಜ್ಯ ಸರ್ಕಾರದಿಂದ ಕಳುಹಿಸುವುದಕ್ಕೆ ಒಂದು ಪ್ರಸ್ತಾಪವನ್ನು ಅವರು ಕಳುಹಿಸುವುದಾದರೆ ಅದರಿಂದ ಖಂಡಿತವಾಗಿಯೂ ರೈತರಿಗೆ ಸಹಾಯ ಮಾಡಿದ ಹಾಗೆ ಆಗುತ್ತದೆ. ರೈತರಿಗೆ ಏನು ಚರ್ಚೆ ಮೂಲಕ ನ್ಯಾಯವನ್ನು ಒದಗಿಸಬೇಕೋ ಅವನ್ನು ಒದಗಿಸಿದ ಹಾಗೆ ಆಗುತ್ತದೆ. ಅದನ್ನು ಬಿಟ್ಟು ಅವರು ಇಲ್ಲಿ ಹೇಳಿದ್ದನ್ನೇ ಹೇಳುತ್ತಿದ್ದರೆ ಏನೂ ಪ್ರಯೋಜನ ಆಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ವಿರೋಧ ಪಕ್ಷದ ಎಲ್ಲಾ ಶಾಸಕರ ಒಂದು ನಿಯೋಗವನ್ನು ತೆಗೆದುಕೊಂಡು ಹೋಗೋಣ. ಈಗಿನ ನಿಮ್ಮ ಯೋಜನೆಯಿಂದ ನಮ್ಮ ರಾಜ್ಯದ ರೈತರಿಗೆ ಅನುಕೂಲವಾಗುತ್ತಿಲ್ಲ. ಆದ್ದರಿಂದ ೨-೧೦-೮೯ರಿಂದ ಸಾಲಗಾರರಾಗಿರುವ ಎಲ್ಲ ರೈತರಿಗೆ ಹತ್ತು ಸಾವಿರದವರೆಗೆ ಸಾಲವನ್ನು ಮನ್ನಾ ಮಾಡುವ ಬಗ್ಗೆ ಒಂದು ನಿರ್ಣಯ ಮಾಡಿ, ಅದನ್ನು ತೆಗೆದುಕೊಂಡು ನಾಳೆಯೇ ಮಾನ್ಯ ಮುಖ್ಯಮಂತ್ರಿಗಳು ನಮ್ಮನ್ನೆಲ್ಲಾ ಕರೆದುಕೊಂಡು ಕೇಂದ್ರಕ್ಕೆ ನಿಯೋಗವನ್ನು ತೆಗೆದುಕೊಂಡು ಹೋಗಲು ಸಿದ್ಧರಾಗಲಿ. ಹಾಗಿದ್ದರೆ ನಾವೂ ಧರಣಿಯನ್ನು ವಾಪಸ್ಸು ತೆಗೆದುಕೊಂಡು ಕೇಂದ್ರ ಸರ್ಕಾರದ ಜೊತೆಯಲ್ಲಿ ಏನು ಕೆಲಸ ಮಾಡಬೇಕೋ ಅದನ್ನು ಮಾಡಲು ಸಿದ್ಧರಾಗಿದ್ದೇವೆ.

ಶ್ರೀ ಆರ್. ವಿ. ದೇಶಪಾಂಡೆ.— ಕೇಂದ್ರ ಸರ್ಕಾರದ ಧೋರಣೆಯಿಂದ ರೈತರಿಗೆ ಯಾವ ರೀತಿಯ ಲಾಭವೂ ಆಗುವುದಿಲ್ಲವೆಂದು ಮಾನ್ಯ ಯಡಿಯೂರಪ್ಪನವರು ಹೇಳಿದರು. ಇದಕ್ಕೆ ನಾನು ಬಹಳ ವಿನಯದಿಂದ ಹೇಳುತ್ತೇನೆ. ಅವರು ಹಾಗೆ ಹೇಳಬಾರದು. ಈ ಒಂದು ಯೋಜನೆಯಿಂದ ರಾಜ್ಯದ ರೈತರಿಗೆ ಸುಮಾರು ೨೪೦ ಕೋಟಿ ರೂಪಾಯಿಗಳಷ್ಟು ಸಹಾಯ ಆಗಬಹುದು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಇದು ನಿಜವಾದರೆ ಅಂಕಿಅಂಶಗಳನ್ನು ಪ್ರಕಟ ಮಾಡಲಿ. ಈ ಯೋಜನೆಯಿಂದ ೪೦ ಕೋಟಿ ರೂಪಾಯಿಗಳ ಹೊರೆಸಹ ರಾಜ್ಯ ಸರ್ಕಾರದ ಮೇಲೆ ಬರುವುದಿಲ್ಲ. ಇದರಿಂದ ಶೇಕಡಾ ೨೫ಷ್ಟು ರೈತರಿಗೂ ಸಹಾಯವಾಗುವುದಿಲ್ಲ. ಕೇಂದ್ರ ಸರ್ಕಾರ ಈ ದೇಶದ ಜನರಿಗೆ ದ್ರೋಹ ಮಾಡುತ್ತಿದೆ. ಇಲ್ಲಿ ವಿರೋಧ ಪಕ್ಷದವರು ಈ ಕಡೆ ತೂತು ಆಡಳಿತ ಪಕ್ಷದ ಈ ನಿಲುವಿನ ಬಗ್ಗೆ ಪ್ರತಿಭಟಿಸಿದೇ ಸುಮ್ಮನಿದ್ದಾರೆ. ರಾಜ್ಯದ ರೈತರು ಸಾಲದ ಹೊಡೆತದಿಂದ ಸಾಯುತ್ತಿದ್ದಾರೆ. (ಗೊಂದಲ) ಕೇಂದ್ರ ಸರ್ಕಾರ ಏನು ಮಾಡುತ್ತಿದೆ ? ರೈತರ ಸಾಲ ಮನ್ನಾ ಮಾಡುತ್ತೇವೆಂದು ಈ ರೀತಿಯ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತಿದೆ. ಆದರೆ ರೈತರು ಬೀದಿಪಾಲಾಗುತ್ತಿದ್ದಾರೆ. ರೈತರನ್ನು ಸರ್ವನಾಶ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಪಾಟಾಳ್ ನಾಗರಾಜ್.— ನಿಜವಾಗಿಯೂ ಈ ಯೋಜನೆಯಿಂದ ರೈತರಿಗೆ ಅನುಕೂಲವಾಗುವುದಿಲ್ಲ. ಆದ್ದರಿಂದ ಇವತ್ತು ಸದಸ್ಯರು ಇಲ್ಲಿ ಪಕ್ಷಗಳ ಪರವಾಗಿ ಮಾತನಾಡುವುದರ ಬದಲು ರೈತರ ಪರವಾಗಿ ಮಾತನಾಡಬೇಕೆಂದು ನನ್ನ ಅಭಿಪ್ರಾಯ.

ಶ್ರೀ ಆರ್ ವಿ. ದೇಶಪಾಂಡೆ.— ರಾಜ್ಯದ ಮುಖ್ಯಮಂತ್ರಿಗಳು ಎಲ್ಲಾ ವಿಚಾರ ಮಾಡಿ ತಮ್ಮ ಹೇಳಿಕೆ ನೀಡಿದ್ದಾರೆ. ರೈತರಿಗೆ ೨೪೦ ಕೋಟಿ ಸಹಾಯ ಸಿಗುತ್ತದೆಂದು ಅವರೇ ಹೇಳಿದ್ದಾರೆ. ಅದನ್ನು ನಾವು ನಂಬಬೇಕಾಗುತ್ತದೆ. ಒಂದು ವೇಳೆ ಇದು ಸರಿಯಿಲ್ಲ ಎನ್ನುವುದಾದರೆ ಮಾನ್ಯ ಯಡಿಯೂರಪ್ಪನವರು ಮತ್ತು ಅವರ ಮಿತ್ರರು ಈ ಬಗ್ಗೆ ಒಂದು ಪ್ರಸ್ತಾಪ ಮಂಡಿಸಲಿ. ಒಟ್ಟಿನಲ್ಲಿ ರೈತರ ಸಾಲ ಮನ್ನಾ ಆಗಬೇಕು. ಮಾನ್ಯ ಯಡಿಯೂರಪ್ಪನವರು ಹೇಳುವುದು ನಿಜವಿದ್ದರೆ ಅದನ್ನು ನಾವೂ ಒಪ್ಪುತ್ತೇವೆ. ಕೇಂದ್ರದ ಈ ಯೋಜನೆಯಿಂದ ರೈತರಿಗೆ ಸಹಾಯವಾಗುವುದಿಲ್ಲ, ದುಡ್ಡು ಸಿಗುವುದಿಲ್ಲ ಎಂದರೆ ರಾಜ್ಯ ಸರ್ಕಾರ ಏಕೆ ಪ್ರಪೋಸಲ್ ಕಳುಹಿಸುತ್ತಿತ್ತು ? ರೈತರ ಬಗ್ಗೆ ನಿಮಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನಮಗೂ ಇದೆ. ಕೇಂದ್ರ ಸರ್ಕಾರ ಏನು ಬೇಜವಾಬ್ದಾರಿಯಿಂದ ಈ ಬಗ್ಗೆ ನಡೆದುಕೊಂಡಿದೆ ಎಂದು ತಾವು ಏನು ಹೇಳಬಯಸುತ್ತಿದ್ದೀರಿ, ಈ ವಿಷಯದ ಬಗ್ಗೆ ನಿಮ್ಮ ಬಿಜೆಪಿ ಪಕ್ಷದ ನಾಯಕರಿಗೆ ಆಲ್ಲಿ ಮಾತನಾಡುವುದಕ್ಕೆ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ — ರೈತರ ಪರವಾಗಿ ನೀವು ಏನು ಹೇಳುತ್ತಿದ್ದೀರಿ? ಈ ಸದನದಲ್ಲಿ ನಾವು ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಆದರೆ ನಿಮಗೆ ಜವಾಬ್ದಾರಿ ಇಲ್ಲವೇ? ನಿಮ್ಮ ಜವಾಬ್ದಾರಿ ಏನು?

ಅಧ್ಯಕ್ಷರು — ಮಾನ್ಯ ಸದಸ್ಯರಲ್ಲಿ ವಿನಂತಿ: ನಾಲ್ಕಾರು ಪಕ್ಷಗಳು ಸೇರಿಕೊಂಡು ಕೇಂದ್ರದಲ್ಲಿ ಸರ್ಕಾರ ನಡೆಸುತ್ತಿವೆ. ಆದ್ದರಿಂದ ನಿಮ್ಮ ಬಿನ್ನಾಭಿಪ್ರಾಯಗಳು ಏನಿದ್ದರೂ ಸದನದ ಹೊರಗಡೆ ಈ ಬಿನ್ನಾಭಿಪ್ರಾಯಗಳನ್ನು ನಿವಾರಣೆ ಮಾಡಿಕೊಂಡು ಸದನದ ಒಳಗೆ ಬರಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ.— ಕೇಂದ್ರ ಸರ್ಕಾರದ ಬಗ್ಗೆ ಭಿನ್ನಾಭಿಪ್ರಾಯಗಳು ಏನೇ ಇರಲಿ, ಆದರೆ ಕೇಂದ್ರದ ಯೋಜನೆಯಿಂದ ಈ ರಾಜ್ಯದ ರೈತನಿಗೆ ನ್ಯಾಯ ಸಿಕ್ಕಿದೆಯೇ? ಅವರ ಯೋಜನೆಯಿಂದ ಶೇಕಡ ಇಬ್ಬರಿಗೆ ಮಾತ್ರ ನ್ಯಾಯ ಸಿಗಬಹುದು. ಆದ್ದರಿಂದ ನಿಮ್ಮ ಯೋಜನೆಯನ್ನು

ಮಾಪಾರ್ಡು ಮಾಡಿಯೆಂದು ಹೇಳುವ ಅಧಿಕಾರ ಈ ಸದನಕ್ಕಿದೆ. ಅವರ ಯೋಜನೆಯನ್ನು ಮಾಪಾರ್ಡು ಮಾಡಿ ಕಾರ್ಯಗತ ಮಾಡಿಯೆಂದು ಹೇಳುವ ಅಧಿಕಾರ ಮತ್ತು ಆ ರೀತಿ ನಿರ್ಣಯವನ್ನು ಮಾಡುವ ಅಧಿಕಾರ ಈ ಸದನಕ್ಕೆ ಇದೆ. ಆದ್ದರಿಂದ ಆ ರೀತಿ ಮಾಡಬೇಕೆಂದು ನಾವು ಒತ್ತಾಯ ಮಾಡುತ್ತಿದ್ದೇವೆ.

ಅಧ್ಯಕ್ಷರು.— ಮಾನ್ಯ ಯಡಿಯೂರಪ್ಪನವರೆ. ಕೇಂದ್ರ ಸರ್ಕಾರದ ಯೋಜನೆಯ ಬಗ್ಗೆ ಹೊಸ ಆ್ಯಂಗಲ್ ತರುತ್ತಿದ್ದೀರಿ. ಆದ್ದರಿಂದ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಒಂದು ನೋಟೀಸ್ ಕೊಡಿ ನಾನು ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಕೊಡುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.— ಮಾನ್ಯ ಮುಖ್ಯ ಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ. ೨೪೦ ಕೋಟಿ ರೂಪಾಯಿ ಕೇಂದ್ರಸರ್ಕಾರದ ಯೋಜನೆಯಿಂದ ಸಿಗುತ್ತದೆಂದು ಹೇಳಿದ್ದಾರೆ. ಒಂದು ವೇಳೆ ಮಾನ್ಯ ಯಡಿಯೂರಪ್ಪನವರು, ಕಾಗೋಡು ತಿಮ್ಮಪ್ಪನವರು ಈ ಯೋಜನೆಯಿಂದ ರೈತರಿಗೆ ಅನುಕೂಲವಾಗುತ್ತಿಲ್ಲ ಏನ್ನುವುದಾದರೆ, ಅದಕ್ಕಿಂತ ಹೆಚ್ಚಿನ ಯೋಜನೆ ಇದ್ದರೆ ಅದನ್ನು ಸಭೆಯ ಮುಂದೆ ತರಲಿ, ಅದಕ್ಕೆ ನಾವೂ ಸಪೋರ್ಟ್ ಮಾಡುತ್ತೇವೆ. ರೈತರ ಸಾಲ ಸಂಪೂರ್ಣವಾಗಿ ಮನ್ನಾ ಆಗಬೇಕು. ಸುಮ್ಮನೆ ಬೇಜವಾತ್ದಾರಿತನದಿಂದ ಕೇಂದ್ರ ಸರ್ಕಾರದ ಮೇಲೆ ಆಪಾದನೆ ಮಾಡುವುದು ಸರಿಯಲ್ಲ. ಇರತಕ್ಕ ಪ್ರಶ್ನೆಯನ್ನ ಬಗೆಹರಿಸಲಿಕ್ಕೆ ಸರಿಯಾದ ಮಾರ್ಗವನ್ನು ಹಿಡಿಯಬೇಕಾಗುತ್ತದೆ. ಈ ಬಗ್ಗೆ ಅವರಲ್ಲಿ ಸಲಹೆ ಸೂಚನೆಗಳು ಇದ್ದರೆ ಹಾಗೂ ಯೋಜನೆಗಳು ಇದ್ದರೆ ಅವುಗಳನ್ನು ತಮ್ಮ ಮೂಲಕ ಸರ್ಕಾರಕ್ಕೆ ಕಳುಹಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.— ತಮ್ಮಲ್ಲಿ ಅರಿಕೆ ಮಾಡುವುದೇನೆಂದರೆ. ಸಭಾನಾಯಕರ ವಿರೋಧ ಪಕ್ಷದ ನಾಯಕರ ಒಂದು ನೇತೃತ್ವದಲ್ಲಿ ಹಾಗೂ ಅಧ್ಯಕ್ಷತೆಯಲ್ಲಿ ಒಂದು ನಿಯೋಗವನ್ನು ಕಳುಹಿಸುವಂತಹ ವ್ಯವಸ್ಥೆಯನ್ನು ಮಾಡಬಹುದು. ಈವೊಂದು ಯೋಜನೆಯಿಂದ ರೈತರಿಗೆ ಎಷ್ಟು ಅನುಕೂಲವಾಗುತ್ತದೆ ಎಂಬುದನ್ನು ತಾವು ಕಂಡುಕೊಳ್ಳಬೇಕು. ನಮ್ಮ ಹಕ್ಕನ್ನು ತಾವು ಕಾಪಾಡಬೇಕು ೨೪೦ ಕೋಟಿ ರೂಪಾಯಿ ಸ್ಥೂಲ ಮನ್ನಾ ಆದರೆ, ಅದರಲ್ಲಿ ರಾಜ್ಯ ಸರ್ಕಾರಕ್ಕೆ ೧೪೦ ಕೋಟಿ ರೂಪಾಯಿ ಖರ್ಚು ಬರುತ್ತದೆಂದು ಹೇಳುತ್ತಾರೆ. ಹಾಗಿದ್ದರೆ ಅಂಕಿಅಂಶಗಳನ್ನು ಕೊಡಲಿ ಆದರೆ ಇದುವರೆಗೆ ಕೊಟ್ಟಿಲ್ಲ. ಕೊಟ್ಟರೆ ನಾನು ವಾಪಸ್ಸು ಬಂದು ನನ್ನ ಸೀಟಿನಲ್ಲಿ ಕುಳಿತುಕೊಳ್ಳುತ್ತೇನೆ. ಮುಖ್ಯಮಂತ್ರಿಗಳು ರೈತರ ಕಣ್ಣಿಗೆ ಮಣ್ಣೆರಚುವ ಕೆಲಸ ಮಾಡುತ್ತಿದ್ದಾರೆ.ರೈತರಿಗೆ ಅನುಕೂಲವಾಗುವ ಈ ೨೪೦ ಕೋಟಿ ರೂಪಾಯಿ ಯೋಜನೆ ಕಾರ್ಯರೂಪಕ್ಕೆ ಬರುತ್ತದೆ ಎಂದರೆ ಅದನ್ನು ನಾನು ಒಪ್ಪಿಕೊಳ್ಳಲು ಸಿದ್ಧನಾಗಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೇ ಈ ರೈತರ ವಿಷಯದ ಬಗ್ಗೆ ಒಂದು ನಿಮಿಷ ನಾನು ಮಾತನಾಡುತ್ತೇನೆ. ಕೇಂದ್ರದ ಯೋಜನೆಯ ಮಾಪಾರ್ಟಿನ ಬಗ್ಗೆ ಚರ್ಚೆ ಮಾಡಲಿಕ್ಕೆ ಒಂದು ನೋಟೀಸ್ ಕೊಡಿಯೆಂದು ತಾವು ಸೂಚನೆ ಮಾಡಿದಿರಿ,ಬಹಳ ಸುಲಭವಾದ ಒಂದು ವಿಚಾರವನ್ನು ಮಾನ್ಯ ಸದಸ್ಯರು ತಮ್ಮ ಗಮನಕ್ಕೆ ತಂದಿದ್ದಾರೆ. ತಾವು ಸಭಾನಾಯಕರ ಜೊತೆ ಮಾತುಕತೆ ನಡೆಸಿ ವಿರೋಧ ಪಕ್ಷದವರ ಜೊತೆ ಮಾತುಕತೆ ನಡೆಸಿ ಒಂದು ನಿಯೋಗವನ್ನು ದೆಹಲಿಗೆ ಕಳುಹಿಸುವಂತಹದ್ದು ಬಹಳ ಸುಲಭವಾದುದು. ಈ ಬಗ್ಗೆ ತಾವು ಮುಂದಾಳತ್ವವನ್ನು ವಹಿಸಿಕೊಳ್ಳಬೇಕು, ಎಲ್ಲ ಸದಸ್ಯರಅಭಿಪ್ರಾಯಗಳನ್ನೂ ತಾವು ಅರ್ಥಮಾಡಿಕೊಂಡಿದ್ದೀರಿ. ಬಿ.ಜೆ.ಪಿ. ಸದಸ್ಯರು ಧರಣಿ ಮಾಡುತ್ತಿದ್ದಾರೆ. ಆದನ್ನು ನಿಲ್ಲಿಸತಕ್ಕ ಕೆಲಸ ಮುಖ್ಯವಾಗಿ ಆಗಬೇಕಾಗಿದೆ. ಅವರು ಕೇಳಿರತಕ್ಕದ್ದು ಬಹಳ ಸಾಮಾನ್ಯವಾದ ಬೇಡಿಕೆ ಅದನ್ನು ತಮ್ಮ ಮುಂದಿಟ್ಟಿದ್ದಾರೆ. ಈಗ ಸದನದ ಸಮಿತಿಯನ್ನು ಮಾಡಿ ಆ ಸಮಿತಿಯನ್ನು ದೆಹಲಿಗೆ ಕಳುಹಿಸತಕ್ಕ ವ್ಯವಸ್ಥೆಯನ್ನು ಮಾಡಿ. ನಿಯೋಗ ದೆಹಲಿಗೆ ಹೋಗಬೇಕು. ಆ ವ್ಯವಸ್ಥೆಯನ್ನು ತಾವು ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.— ನಿಯೋಗ ಏತಕ್ಕೆ?

ಶ್ರೀ ವಾಟಾಳ್ ನಾಗರಾಜ್.— ಕೇಂದ್ರ ಸರ್ಕಾರದ ಯೋಜನೆ ಸರಿಯಿಲ್ಲವೆಂದು ಹೇಳುತ್ತಿದ್ದಾರೆ. ಎಲ್ಲ ಪಕ್ಷಗಳ ಒಂದು ನಿಯೋಗ ದೆಹಲಿಗೆ ಹೋಗಲಿ.

ಶ್ರೀ ಕಾಗೋಡು ತಿಮ್ಮಪ್ಪ.— ನಿಯೋಗ ಹೋಗಲಿ, ಆದರೆ ಮುಖ್ಯ ಮಂತ್ರಿಗಳು ಮೊನ್ನೆ ಹೇಳಿದ ಹಾಗೆ, ಕೇಂದ್ರ ಸರ್ಕಾರದ ಸೂತ್ರಗಳಿಗೆ ಅನ್ವಯಿಸತಕ್ಕ ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ರೂಪಿಸಿ ಕಳುಹಿಸಿಕೊಡಿಯೆಂದು ಕೇಂದ್ರದವರು ಕೇಳಿದ್ದಾರೆ. ಆ ರೀತಿ ಮಾಡಿದರೆ

ಮಾತ್ರ ಆ ಯೋಜನೆಯ ಅರ್ಧ ಭಾಗದ ಲಾಭ ನಮಗೆ ಸಿಗುತ್ತದೆ. ಆದರೆ ಕೇಂದ್ರ ಸರ್ಕಾರ ತಯಾರು ಮಾಡಿರುವ ಮಾರ್ಗಸೂಚಿಗಳು ಏನಿವೆ ಅದರ ಪ್ರಕಾರ ರೈತನಿಗೆ ನ್ಯಾಯ ಸಿಗುವುದಿಲ್ಲ. ಆದ್ದರಿಂದ ಕೇಂದ್ರದ ಯೋಜನೆ ಬಗ್ಗೆ ನಾವು ಇಲ್ಲಿ ಕುಳಿತುಕೊಂಡು ಚರ್ಚೆ ಮಾಡಿ ಅದನ್ನು ಮೂಲಭೂತವಾಗಿ ಬದಲಾವಣೆ ಮಾಡಿದರೆ ಮಾತ್ರ ನಿಜವಾಗಿಯೂ ರೈತನಿಗೆ ಸಹಾಯ ಸಿಗುತ್ತದೆ. ಆಗ ಕೇಂದ್ರ ಸರ್ಕಾರದ ಯೋಜನೆಯಿಂದ ರಾಜ್ಯ ಸರ್ಕಾರಕ್ಕೆ ಅರ್ಧ ಭಾಗದ ಹಣ ಬರುತ್ತದೆ. ಆ ರೀತಿ ಸೂಚನೆ ಮಾಡಿದರೆ ರೈತರಿಗೆ ಹೆಚ್ಚು ಪ್ರಯೋಜನ ಸಹ ಆಗುತ್ತದೆ.

೧೨–೪೦ ಪಿ.ಎಂ.

ಆದ್ದರಿಂದ ಮಾನ್ಯ ಯಡಿಯೂರಪ್ಪನವರು ಹೇಳುವ ಹಾಗೆ ಸದನದ ಚರ್ಚೆ ಮಾಡುವುದಕ್ಕೆ ಎಲ್ಲರೂ ಸೇರಿ ಅವಕಾಶ ಮಾಡಿಕೊಡೋಣ. ಸುಮ್ಮನೆ ನಿಯೋಗ ಹೋಗುವುದರಿಂದ ಏನೂ ಪ್ರಯೋಜನ ಆಗುವುದಿಲ್ಲ. ನಾವು ಏನು ಹೇಳಬೇಕೆಂದು ಸರಿಯಾಗಿ ಹೋಗಿ ಹೇಳದೇ ಇದ್ದರೆ ಕೇಂದ್ರ ಸರ್ಕಾರದಿಂದ ಬಡತಕ್ಕಂಥ ಪ್ರಯೋಜನ ನಮಗೆ ಸಿಗುವುದಿಲ್ಲ. ನಿಜವಾಗಿ ನಾವು ರೈತರ ಪರವಾಗಿ ವಾದ ಮಾಡುತ್ತಿದ್ದರೆ, ಅರ್ಧ ಭಾಗದ ಸಾಲ ಹೋಗಬೇಕೆಂದೂ ಇದ್ದರೆ ಈಗ ಮಾಡಿರತಕ್ಕಂಥ ಅವರ ಮಾರ್ಗ ಸೂಚಿ ಏನು ಇದೆಯಲ್ಲ, ಅದನ್ನು ಪರಿವರ್ತನೆ ಮಾಡಬೇಕು, ಬದಲಾವಣೆ ಮಾಡಬೇಕು. ಅದಕ್ಕಾಗಿ ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಡಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.— ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದ್ದು ಸರಿ ಇದೆ. ಅದಕ್ಕೆ ಸಂಪೂರ್ಣವಾಗಿ ನಮ್ಮ ಅನುಮೋದನೆ ಇದೆ. ಅದಕ್ಕೋಸ್ಕರ ಕೇಂದ್ರ ಸರ್ಕಾರದ ಯೋಜನೆ ಯಾವರೀತಿ ಮಾರ್ಪಾಡು ಆಗಬೇಕು ಎನ್ನುವುದರ ಬಗ್ಗೆ ಚರ್ಚೆ ಪ್ರಾರಂಭಮಾಡಿ. ಬೇರೆಬೇರೆ ರಾಜ್ಯ ಸರ್ಕಾರಗಳು.....

ಶ್ರೀ ಬಿ. ಹೆಚ್. ಬನ್ನಿಕೋಡ್.— ರಾಜ್ಯದ ರೈತರಿಗೆ...

(ಗೊಂದಲ)

ಅಧ್ಯಕ್ಷರು.— ಮೂರು ಜನ ಒಟ್ಟಿಗೆ ನಿಂತು ಮಾತನಾಡಿದರೆ ಯಾರು ಹೇಳಿದ್ದನ್ನು ಬರೆದು ಕೊಳ್ಳಬೇಕು ಇವರು ?

ಶ್ರೀ ಬಿ. ಹೆಚ್. ಬನ್ನಿಕೋಡ್.— ಸಮಗ್ರ ರಾಜ್ಯದ ರೈತರಿಗೆ ಹೆಚ್ಚಿನ ಅನುಕೂಲ ಆಗಬೇಕು ಎನ್ನುವ ಉದ್ದೇಶ ಇಡೀ ಸದನದಲ್ಲಿ ಪ್ರತಿಯೊಬ್ಬ ಸದಸ್ಯರಿಗೆ ಇದೆ. ಈ ಹಿಂದೆ ಕೇಂದ್ರಸರ್ಕಾರ ರಾಜ್ಯದ ಅಥವಾ ರಾಷ್ಟ್ರದ ಯಾವುದೇ ರೈತನಿಗೆ ಯಾವುದೇ ಪರಿಹಾರ ಕೊಡದೆ ಇದ್ದರೂ ಸಹಿತ ರಾಷ್ಟ್ರೀಯ ರಂಗದ ಸರ್ಕಾರ ರೈತರಿಗೆ ಋಣಪರಿಹಾರ ಕೊಡಲಿಕ್ಕೆ ಈಗ ಒಂದು ಸೂತ್ರವನ್ನು ಮುಂದೆ ಹಾಕಿಕೊಂಡು ಬಂದಿದೆ. ಆದರೆ ಅದು ಸಾಕಷ್ಟು ಜನರಿಗೆ ಪ್ರಯೋಜನ ಆಗುವುದಿಲ್ಲ. ಹೆಚ್ಚು ಜನ ರೈತರಿಗೆ ಅನುಕೂಲವಾಗುವುದಿಲ್ಲ ಎನ್ನುವ ದೃಷ್ಟಿಯಿಂದ ಈ ಸದನದಲ್ಲಿ ಪಕ್ಷಾತೀತವಾದ ಒಂದು ನಿರ್ಣಯವನ್ನು ತೆಗೆದುಕೊಂಡು ಹತ್ತು ಸಾವಿರ ರೂಪಾಯಿಗಳ ಸಾಲವನ್ನು ಯಾವುದೇ ಕರಾರುರಹಿತವಾಗಿ ಈ ರಾಜ್ಯದ ಹಾಗೂ ರಾಷ್ಟ್ರದ ರೈತರ ಸಾಲ ಮನ್ನಾ ಮಾಡಬೇಕೆಂದು ಸರ್ವಾನು ಮತದ ನಿರ್ಣಯವನ್ನು ಈ ಸಭೆಯಲ್ಲಿ ಕೈಗೊಂಡಿದ್ದೇ ಆದರೆ, ರಾಜ್ಯದ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಸದನದಲ್ಲಿ ಇಮತ್ತಿನ ದಿವಸ ಧರಣಿ ನಡೆಸುತ್ತಿರುವ ನಮ್ಮ ಸ್ನೇಹಿತರು ತಮ್ಮ ಧರಣಿಯನ್ನು ಸಹಿತ ಮುಕ್ತಾಯ ಮಾಡುತ್ತಾರೆ ಎಂಬ ಆಸೆ ನನಗಿದೆ. ಈ ನಿರ್ಣಯ ಮಾಡುವುದು ಸೂಕ್ತವಾಗಿರುವುದರಿಂದ ಈ ಸದನ ಸರ್ವಾನುಮತದಿಂದ ನಿರ್ಣಯ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇವರ ನಾಯಕತ್ವವನ್ನು ಮಾನ್ಯ ಮುಖ್ಯಮಂತ್ರಿಗಳು ವಹಿಸಬೇಕು ಮತ್ತು ಕೇಂದ್ರಕ್ಕೆ ಒಂದು ನಿಯೋಗವನ್ನು ತೆಗೆದುಕೊಂಡು ಹೋಗಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ

SRI QUAMARUL ISLAM.— Sir, I have given a notice under rule 72 on the 5th of this month...

ಶ್ರೀ ಬಿ. ಎಸ್. ಯಡಿಯೂರಪ್ಪ.— ಸ್ವಾಮಿ, ರೈತರ ಬಗ್ಗೆ ಒಂದು ನಿಯೋಗ ಹೋಗಬೇಕು. ಹೊಸ ವಿಷಯವನ್ನು ತೆಗೆದುಕೊಳ್ಳುವ ಮುನ್ನ...

(ಗೊಂದಲ)

† SRI QUAMARUL ISLAM.— I am not yielding. I am on my legs. I am on a point of order. The hon'ble speaker has allowed me to speak. People have been killed. I have given notice about what is happening in Mysore. People are dying. When the procession was going on in Aland Taluka in Andlke village, people have thrown stones from the Shivasena president's house on the procession resulting in the killing of people who were in the procession. On this issue I have given notice on 5th. I have also given a notice on the situation prevailing in Mysore. It is a law and order problem. There are 3 Ministers from Mysore. Right from 28th to 30th of last month the problem is continuing. I want to highlight all those things. I have given notices on these things. I want to know what happened to all these notices. I want to know when these things will be taken up in the House.

MR. SPEARKR.— The other day a statement was made by the Hon'ble Minister Sri T. N. Narasimha Murthy. After that, I found that certain concensus was emerged and that the situation was being eased...

SRI QUAMARUL ISLAM.— Sir, I am not satisfied. That matter has to be taken up for discussion now. When a denifite notice has been given by me, I must be allowed to speak. I have got a right to speak.

MR. SPEAKER.— I will look into it,

SRI QUAMARUL ISLAM.— I want to know when it will be taken up. Whether it will be taken up tomarrow? I want a definite reply from you. Here, discrimination has been made. Whenever there are deaths of daliths in other parts of the State, the Government used to hold judicial enquiries and the concerned officers who were responsible were kept under suspension. Here, such a thing has not happened. The Government has not taken action in the matter. I ask the Government to take action and initiate judicial enquiry and punish the culprits. Why the Minister has not visited the affected area and why he has not announced ex-gratia payment? I am not satisfied. I have given a definite notice. I wanted that the Minister should reply. I want an answer to the calling attention notice given by me.

(Interruption)

SRI QUAMARUL ISLAM.— Why they have not taken up when I have given notice on 5th? Right from 29th onwords it is going on. Even today, there is tension in Mysore.

MR. SPEAKER.— I would like the Hon'ble Member to excercise caution. This is a highly sensitive issue. By getting emotional, you are not helping anybody.

† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಆಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

SRI QUAMARUL ISLAM.— I was excercising patience, hitherto. I do not want the highest tradition of this House to be affeted. When a notice has been given by me, I expect that the Hon'ble Minister to reply to my notice on behalf of the Government. This should be taken up in the House. When some hon'ble members raise certain issues under zero hour. immediately replies were given by Minister. What about my calling attention notice ? What about my right ?

MR. SPEAKER.— At that time. you should be present.

SRI QUAMARUL ISLAM.— What about my notice ? If the issues are coming and concesus is there, can we ignone them ? I want a definite answer to my notice.

MR. SPEAKER.—I will look into it.

†ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ಬೇರೆ ಬೇರೆ ರಾಜ್ಯ ಸರ್ಕಾರಗಳು, ಈ ಕೇಂದ್ರ ಸರ್ಕಾರದ ಯೋಜನೆಯಿಂದ ರೈತರಿಗೆ ಉಪಯೋಗವಿಲ್ಲವೆಂದು ಅಲ್ಲಿನ ಸದನದಲ್ಲಿ ಚರ್ಚೆ ಮಾಡಿ, ಹೊಸ ಹೊಸ ಯೋಜನೆಗಳನ್ನು ತಯಾರು ಮಾಡಿ ಕೇಂದ್ರಕ್ಕೆ ಕಳುಹಿಸುತ್ತಿದ್ದಾರೆ. ಅದೇ ರೀತಿ ನಮ್ಮಲ್ಲಿಯೂ, ಈ ರಾಜ್ಯದ ರೈತರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಈ ವಿಷಯವಾಗಿ ಸದನದಲ್ಲಿ ಚರ್ಚೆ ಮಾಡಬೇಕು. ನಾವೂ ಬೇರೆ ರಾಜ್ಯಗಳವರಂತೆ ಹೊಸ ಯೋಜನೆಯನ್ನು ತಯಾರು ಮಾಡಿ ಕಳುಹಿಸಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ, ವಿರೋಧ ಪಕ್ಷಗಳ ಸದಸ್ಯರೊಂದಿಗೆ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಬೇಕು. ಆದ್ದರಿಂದ ಇವತ್ತು ಬೇರೆ ಎಲ್ಲಾ ಕಾರ್ಯಕ್ರಮಗಳನ್ನೂ ಬದಿಗೊತ್ತಿ, ನಮ್ಮ ರಾಜ್ಯದ ರೈತರಿಗೆ ಕೇಂದ್ರ ಸರ್ಕಾರದ ಯೋಜನೆಯಿಂದ ಅನುಕೂಲ ಸಿಕ್ಕುತ್ತಿಲ್ಲ. ಆದ್ದರಿಂದ ಹೊಸ ಯೋಜನೆಯನ್ನು ಯಾವ ರೀತಿ ತಯಾರಿಸಬೇಕೆಂಬ ಬಗ್ಗೆ ನಾವು ಚರ್ಚೆ ಮಾಡಬೇಕು. ವಿರೋಧ ಪಕ್ಷಗಳ ಜೊತೆಯಲ್ಲಿ ಮುಖ್ಯಮಂತ್ರಿಗಳೂ ಹೋಗಿ, ಪ್ರಧಾನ ಮಂತ್ರಿಗಳಿಗೆ ಕನ್‌ವೀನ್ಸ್ ಮಾಡಬೇಕು. ಇದುವರೆಗೆ ಬೇರೆ ಎಲ್ಲಾ ರಾಜ್ಯ ಸರ್ಕಾರಗಳು ಈ ಕೆಲಸವನ್ನು ಮಾಡುತ್ತಿವೆ. ಇವತ್ತು ರೈತ ತ್ರಿಶಂಕು ಸ್ವರ್ಗದಲ್ಲಿದ್ದಾನೆ. ಮಳೆಗಾಲ ಪ್ರಾರಂಭವಾಗಿದೆ. ಬಿತ್ತನೆ ಕೆಲಸ ಶುರು ಮಾಡಬೇಕಾಗಿದೆ. ಅವನ ಹತ್ತಿರ ದುಡ್ಡು ಇಲ್ಲದೇ ಇರುವುದರಿಂದ ತೊಂದರೆಯಲ್ಲಿದ್ದಾನೆ. ಆದ್ದರಿಂದ ಇದಕ್ಕೆ ಅವಕಾಶ ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಸಭಾಧ್ಯಕ್ಷರೇ, ಈ ವಿಷಯ ಚರ್ಚೆಗೆ ಹೊಸದೇನೂ ಅಲ್ಲ. ಹಲವಾರು ಸಾರಿ ಈಗಾಗಲೇ ಚರ್ಚೆಯಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳೂ ವಿವರವಾದ ಉತ್ತರವನ್ನು ಈಗಾಗಲೇ ಕೊಟ್ಟಿದ್ದಾರೆ. ಆದರೂ ಕೂಡ ಇಲ್ಲಿ ಮತ್ತೊಂದು ರೂಪದಲ್ಲಿ ಸಲಹೆಗಳು ಬರುತ್ತಿವೆ. ಈ ವಿಷಯ ಗಹನವಾದುದು, ಪ್ರಾಮುಖ್ಯತೆ ಹೊಂದಿರುವುದು ಮತ್ತು ಜರೂರು ಹೌದು ಎಂಬುದರಲ್ಲಿ ಮತ್ತೊಂದು ಅಭಿಪ್ರಾಯ ಇಲ್ಲ. ಸರ್ಕಾರದ ವತಿಯಿಂದ ಮುಖ್ಯಮಂತ್ರಿಗಳು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಈ ವಿಷಯದ ಅಂತಿಮ ತೀರ್ಮಾನ ಕೇಂದ್ರ ಸರ್ಕಾರದ ಮಂಡಿಲಲ್ಲಿರಬೇಕಾದರೆ ಬೇರೆ ಬೇರೆ ರಾಜ್ಯ ಸರ್ಕಾರಗಳು ತಮ್ಮದೇ ಆದ ರೀತಿಯಲ್ಲಿ ಕೆಲವು ತೀರ್ಮಾನಗಳನ್ನು ಮಾಡಿರುವುದು ಪತ್ರಿಕೆಗಳ ಮುಖಾಂತರ ನಾವು ನೋಡುತ್ತಿದ್ದೇವೆ. ಆದ್ದರಿಂದ ಈ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ಮತ್ತೊಂದು ಸಾರಿ ತಮ್ಮ ಗಮನ ಸೆಳೆದಿರುವುದರಲ್ಲಿ ಆಶ್ಚರ್ಯವಿಲ್ಲ. ಮಾನ್ಯ ಯಡಿಯೂರಪ್ಪನವರು ಮತ್ತು ಅವರ ಪಕ್ಷದ ಮಾನ್ಯ ಸದಸ್ಯರು ಹಾಗೂ ಬೇರೆ ಬೇರೆ ಪಕ್ಷದ ಮಾನ್ಯ ಸದಸ್ಯರು ಈ ವಿಚಾರವನ್ನು ಎತ್ತಿರುವುದರಲ್ಲಿ ಅರ್ಥ ಇದೆ. ಇವರ ಬಗ್ಗೆ ಒಂದು ನಿರ್ಣಯ ತರಬೇಕೆಂದು ಒತ್ತಡ ತರುತ್ತಿದ್ದಾರೆ. ಸರ್ವ ಪಕ್ಷಗಳ ನಿಯೋಗ ದೆಹಲಿಗೆ ಹೋಗಬೇಕೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಸರ್ಕಾರದ ವತಿಯಿಂದ ವಿವರವಾದ ಉತ್ತರವನ್ನು ಪುನಃ ಪಡೆಯಬೇಕಾದರೆ, ಈಗಾಗಲೇ ಉತ್ತರ ಕೊಟ್ಟಿರತಕ್ಕ ಮಾನ್ಯ ಮುಖ್ಯಮಂತ್ರಿಗಳ ಹಾಜರಾತಿ ಅತಿ ಅವಶ್ಯಕತೆ ಇದೆ. ಆದರೆ ಇವತ್ತು ತಮಗೆ ಗೊತ್ತಿರುವ ಹಾಗೆ, ಹಾಗೂ ಪತ್ರಿಕೆಗಳಲ್ಲಿ ಬಂದಿರುವ ವರದಿ ಪ್ರಕಾರ, ಮಾನ್ಯ ಮುಖ್ಯಮಂತ್ರಿಗಳು ಪಂಚಾಯತ್‌ರಾಜ್ ವಿಚಾರದಲ್ಲಿ ಪ್ರಧಾನ ಮಂತ್ರಿಗಳು ದೆಹಲಿಯಲ್ಲಿ ಕರೆದಿರುವ ಮುಖ್ಯಮಂತ್ರಿಗಳ ಸಭೆಯಲ್ಲಿ ಭಾಗವಹಿಸಲು ಹೋಗಿರುತ್ತಾರೆ. ಅವರು ಅಲ್ಲಿಂದ ಬಂದ ನಂತರ, ಈ ವಿಚಾರದಲ್ಲಿ ನಿರ್ಣಯ ಮಾಡಬೇಕೇ ಅಥವಾ ಸರ್ವ ಪಕ್ಷಗಳು ನಿಯೋಗ

ಹೋಗಬೇಕೇ ಅಥವಾ ಹೊಸ ಯೋಜನೆ ತಯಾರು ಮಾಡಬೇಕೇ ಎಂಬ ಬಗ್ಗೆ ಚರ್ಚೆ ಮಾಡಿದರೆ, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳೇ ಉತ್ತರ ಹೇಳತಕ್ಕಂಥ ಅವಶ್ಯಕತೆ ಇದೆ. ಏತಕ್ಕೆಂದರೆ ಇದು ರಾಜ್ಯದ ಹಣಕಾಸಿನ ಪರಿಸ್ಥಿತಿಗೆ ನೇರವಾಗಿ ಹಾಗೂ ಮೂಲಭೂತವಾಗಿ ಸಂಬಂಧಪಟ್ಟ ರತಕ್ಕಂಥ ವಿಚಾರವಾಗಿರುವುದರಿಂದ ಅದಕ್ಕೆ ಒಂದೇ ಸಾರಿ ಧಡಕ್ಕೆಂದು ಉತ್ತರ ಕೊಟ್ಟರೆ, ಅದನ್ನು ನಾಳೆ ಜಾರಿಗೆ ತರುವುದಂ ಕಷ್ಟವಾಗಿ ಬಿಟ್ಟರೆ, ಅದು ರೈತರ ಹಿತ ದೃಷ್ಟಿಯಿಂದ ಒಳ್ಳೆಯದಾಗುವುದಿಲ್ಲ. ರೈತರ ಹಿತ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಈ ಮಾತನ್ನು ಆಡುತ್ತಿದ್ದೇನೆ. ತಮ್ಮ ಪ್ರಶ್ನೆಯನ್ನು ಅರ್ಥ ಮಾಡಿಕೊಂಡೇ ಈ ಮಾತನ್ನು ಆಡುತ್ತಿದ್ದೇನೆ. ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಬರುವವರೆಗೆ ಮುಂದಕ್ಕೆ ಹಾಕೋಣ ಎಂದು ತಾವೆಲ್ಲರೂ ಒಪ್ಪಿದರೆ ಅದು ಒಳ್ಳೆಯದೆಂದು ನನ್ನ ಸಲಹೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಈ ಬಗ್ಗೆ ನನ್ನ ಸಲಹೆ ಇಷ್ಟೆ. ತಮಗೆ ಗೊತ್ತಿರುವ ಹಾಗೆ ಸನ್ಮಾನ್ಯ ಮುಖ್ಯಮಂತ್ರಿಗಳೊಬ್ಬರೇ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಹಣಕಾಸಿನ ಪರಿಣಾಮ ಇದರ ಮೇಲೆ ಆಗುವುದಿದೆ. ಬೇರೆ ಬೇರೆ ರಾಜ್ಯ ಸರಕಾರಗಳು ಹೊಸ ಯೋಜನೆಗಳನ್ನು ತಯಾರಿಸಿ ಕೇಂದ್ರಸರಕಾರಕ್ಕೆ ಕಳುಹಿಸಿಕೊಟ್ಟಿವೆ ಅದರ ನಕಲುಗಳನ್ನು ಸರಕಾರ ತರಿಸಿ ಕೊಂಡಿಲ್ಲವೇ ? ತರಿಸಿಕೊಳ್ಳುವುದು ನಿಮ್ಮ ಜವಾಬ್ದಾರಿ ಅಲ್ಲವೇ ? ಈ ಹಿನ್ನೆಲೆಯಲ್ಲಿ ನಮ್ಮ ರಾಜ್ಯದ ರೈತರಿಗೆ ನ್ಯಾಯ ಸಿಗಂವ ದೃಷ್ಟಿಯಿಂದ ಈ ಬಗ್ಗೆ ಚರ್ಚೆ ಪ್ರಾರಂಭವಾಗಲಿ. ಸನ್ಮಾನ್ಯ ಸದನದ ನಾಯಕರು ಬಂದ ಮೇಲೆ, ಇದರ ಬಗ್ಗೆ ಸದನದ ಸಮಿತಿ ಮಾಡಬೇಕೇ, ಸರ್ವ ಪಕ್ಷಗಳ ಒಂದು ನಿಯೋಗ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಹೋಗಬೇಕೇ, ಯಾವ ರೀತಿ ಇರಬೇಕೆಂದು ಮಾತನಾಡುವುದಕ್ಕೆ ಅನುಕೂಲವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲ ಎಂದು ಎಲ್ಲಾ ಕಲಾಪ ನಿಲ್ಲ ಬೇಕೆಂದು ಏನಿಲ್ಲ. ಇದು ಅತ್ಯಂತ ಗಂಭೀರವಾದ, ಪ್ರಮುಖವಾದ ರೈತರ ಅಳಿವು ಉಳಿವಿನ ಪ್ರಶ್ನೆ. ಈ ಒಂದು ಹೊಸ ಯೋಜನೆ ಯಾವ ರೀತಿ ಇರಬೇಕೆಂದು ಚರ್ಚೆ ಮಾಡುವುದಕ್ಕೆ ಪ್ರಾರಂಭ ಮಾಡೋಣ ಚರ್ಚೆಗೆ ಸನ್ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಡಲಿ. ಇದರ ಬಗ್ಗೆ ವಿರೋಧ ಪಕ್ಷದ ನಾಯಕರು ದೆಹಲಿಗೆ ಹೋಗಬೇಕೇ, ಅಥವಾ ನೀವೇ ಹೋಗಿ ಕೇಂದ್ರ ಸರಕಾರಕ್ಕೆ ಕನ್‌ವಿನ್ಸ್ ಮಾಡುತ್ತೀರಾ? ಇದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಈ ಹಿನ್ನೆಲೆಯಲ್ಲಿ ಚರ್ಚೆ ಮಾಡುವುದಕ್ಕೆ ಅಭ್ಯಂತರ ಏನಿಲ್ಲ. ಚರ್ಚೆ ಪ್ರಾರಂಭ ಮಾಡೋಣ. ಚರ್ಚೆ ಪ್ರಾರಂಭ ಮಾಡುವುದಕ್ಕೆ ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಡ ಬೇಕೆಂದು ಹಾಗೂ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.— ಮಾನ್ಯ ಅಧ್ಯಕ್ಷರೇ, ಈ ಕೇಂದ್ರದ ಈ ಒಂದು ಯೋಜನೆಯ ಬಗ್ಗೆ ಅತ್ಯಂತ ಸಮಂಜಸವಾದ ಒಂದು ನಿಲುವನ್ನು ತೆಗೆದುಕೊಂಡಿರುವುದು ಎಂದರೆ ನನಗೆ ಗೊತ್ತಿರುವ ಹಾಗೆ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಒಂದೇ ದೆಹಲಿಯಿಂದ ಬಂದಂಥ ಒಂದು ಹೇಳಿಕೆ ಈ ಯೋಜನೆಯನ್ನು ಜಾರಿಗೆ ತರಬೇಕಾದರೆ ಯಾವುದೇ ಒಂದು ಪರಸ್ಪ್ರಾ ಇರಬಾರದು ಎಂದು ಅಖಿಲ ಭಾರತ ಕಾಂಗ್ರೆಸ್ ಕಚೇರಿಯಿಂದ ಈ ಹೇಳಿಕೆ ಬಂದಿದೆ. ಇದಕ್ಕೆ ಭಿನ್ನವಾದ ಒಂದು ನಿಲುವನ್ನು ಸರಕಾರದ ಪರವಾಗಿ ಇಲ್ಲಿ ಮಂಡಿಸಿದ್ದಾರೆ. ಇದಕ್ಕೆ ಕಾರಣ ಉಂಟು ನಾನು ಅವತ್ತೇ ಹೇಳಿದಹಾಗೆ ಇದು ಒಂದು ಜಾಣ ಯೋಜನೆ, ಇದು ಜಾರಿಗೆ ಬರುವುದಿಲ್ಲ. ಈ ಕಾರಣ ನಮ್ಮ ಜಾಣ ಮುಖ್ಯಮಂತ್ರಿಗಳು ಇದನ್ನು ಒಪ್ಪಿದ್ದಾರೆ. ಅವರು ೧೨೦ ಕೋಟಿ ರೂಪಾಯಿ ಬಡ್ಡಿ ರಹಿತ ಸಾಲ ಕೊಡುವುದಾದರೆ ಇಲ್ಲಿ ಜಾರಿ ಮಾಡುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾನು ಇವತ್ತು ಹೇಳುತ್ತೇನೆ ಈ ೧೨೦ ಕೋಟಿ ರೂಪಾಯಿಯೂ ಖರ್ಚಾಗದೆ ಇವರ ಹತ್ತಿರ ಉಳಿಯುತ್ತದೆ. ಸಾಲ ಪರಿಹಾರ ಕಾರ್ಯಕ್ರಮ ಜಾರಿಗೆ ತರುವುದಕ್ಕೆ ಸಾಧ್ಯ ಇಲ್ಲದಿರುವ ಯೋಜನೆ. ಆ ಕಾರಣ ಮಾನ್ಯ ಮುಖ್ಯಮಂತ್ರಿಗಳು ಬಂದಮೇಲೆ ಚರ್ಚೆ ಆಗಬೇಕು. ಇಲ್ಲಿ ಹೇಳಿರುವಂತಹ ಮಿಲ್‌ಘುಲ್ ಡಿಫಾಲ್ಟರ್ ಎಂಬುದರ ವಿಶ್ಲೇಷಣೆ ಮತ್ತೆ ಬೇರೆ ಅಷ್ಟವಾರು ಸೂತ್ರ, ಇದರ ಮೂಲಕ ಈ ಯೋಜನೆ ಜಾರಿಗೆ ಬರುವುದಿಲ್ಲ. ನಮ್ಮ ವಿರೋಧ ಪಕ್ಷದ ಸದಸ್ಯರೂ ಕೂಡಾ ಹೆತ್ತವರಿಗೆ ಹೆಗ್ಗಣ ಮುದ್ದು ಎಂದು ಅದನ್ನು ಡಿಫೆಂಡ್ ಮಾಡಿಕೊಳ್ಳುವುದು ಸರಿಯಾಗಿ ಕಾಣುವುದಿಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಮಾನ್ಯ ಸದಸ್ಯರಾದ ನಂಜುಂಡಸ್ವಾಮಿಯವರು ಹೆತ್ತವರಿಗೆ ಹೆಗ್ಗಣ ಮುದ್ದು ಎಂಬ ಮಾತನ್ನು ಹೇಳಿದರು. ಇಡೀ ರಾಷ್ಟ್ರದಲ್ಲಿ ರೈತರ ಬಗ್ಗೆ ಯಾವುದೇ ಒಂದು ರೀತಿಯಲ್ಲಿ ಸಹಾಯ ಸಾಕಾರ್ಯ ಮಾಡಬೇಕೆಂದು ಹೊರಟಿದೆ, ಬಡ್ಡಿ ಮನ್ನಾ, ಸಾಲ ಮನ್ನಾ, ವಿಜ್ಞಾನವನ್ನು ಈ ದೇಶದಲ್ಲಿ ಪ್ರಥಮ ಬಾರಿಗೆ ಕೇಂದ್ರದಲ್ಲಿರುವ ರಾಷ್ಟ್ರೀಯ ಸರಕಾರ ಜಾರಿಗೆ ತಂದಿದೆ. ರೈತರ ಪರವಾದ ಹೊಸ ಯೋಜನೆಯನ್ನು ಸಾಲ ಮನ್ನಾ ಯೋಜನೆಯನ್ನು ಮೊಟ್ಟಮೊದಲು ತಂದದ್ದು ರೈತರ ಪರವಾಗಿ ಇರುವಂತಹ ಕೇಂದ್ರ ಸರಕಾರ. ಇದನ್ನು ಸ್ವಾಗತಿಸಬೇಕು. ಹಾಗೂ

ಕೇಂದ್ರ ಸರಕಾರ ಇನ್ನೂ ಹೆಚ್ಚಿನ ರೀತಿಯಲ್ಲಿ ರೈತರಿಗೆ ಅನುಕೂಲಕರವಾದ ರೀತಿಯಲ್ಲಿ ಕರಾರುರಹಿತವಾಗಿ ೧೦ ಸಾವಿರ ರೂಪಾಯಿವರೆಗಿನ ಎಲ್ಲಾ ರೈತರ ಸಾಲವನ್ನು ಮನ್ನಾ ಮಾಡುವಂತಹ ಯೋಜನೆ ಜಾರಿಗೆ ತರೋಣ ಎಂದು ಹೇಳೋಣ. ಹೆಚ್ಚಿನ ಸಹಾಯ ಪಡೆಯೋಣ ಆದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ಆದರೆ ಇಷ್ಟಿಯವರೆಗೆ ಎಂದೂ ಸಿಗದೇ ಇದ್ದಂಥ ಸೌಕರ್ಯವನ್ನು ಕೊಟ್ಟಂಥ ಕೇಂದ್ರ ಸರಕಾರವನ್ನು ಟೀಕೆ ಮಾಡುವುದು ಸರಿಯಲ್ಲ. ಹೆಚ್ಚಿನ ಅನುಕೂಲ ಬೇಕೆಂದು ಕೇಳೋಣ. ಅದನ್ನು ಪಡೆಯುವುದಕ್ಕೆ ರೈತರ ಪರವಾಗಿ ಪ್ರಯತ್ನ ಮಾಡೋಣ. ಇದನ್ನು ಸ್ವಾಗತಿಸೋಣವೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅದಕ್ಕೋಸ್ಕರವೇ ನಾನು ಹೇಳಿದೆ. ಕೇಂದ್ರ ಸರಕಾರವನ್ನು ದೂಷಣೆ ಮಾಡಬೇಕೆಂದು ಆಗಲೇ ಅವರ ಮೇಲೆ ಗೂಬೆ ಕೂರಿಸಬೇಕೆಂಬ ಪ್ರಯತ್ನ ಆಗಲೇ ನಾವು ಮಾಡುತ್ತಿಲ್ಲ. ಅದು ನಮ್ಮ ಉದ್ದೇಶ ಅಲ್ಲ. ಮಾನ್ಯ ಸದಸ್ಯರ ಕಳಕಳಿಯ ಅಭಿಪ್ರಾಯ ವನ್ನು ನಾನು ಒಪ್ಪುತ್ತೇನೆ. ಅನೇಕ ಸಲಹೆಗಳನ್ನು ಕೆಲವು ವಿಚಾರಗಳನ್ನು ಆಧಾರವಾಗಿಟ್ಟುಕೊಂಡು ಒಂದೊಂದು ರಾಜ್ಯ ಸರ್ಕಾರ ಗಳಲ್ಲೂ ಒಂದೊಂದು ರೀತಿಯಲ್ಲಿ ತೀರ್ಮಾನವನ್ನು ಮಾಡಿದ್ದಾರೆ. ಅಲ್ಲಿ ಕೇಂದ್ರ ಸರ್ಕಾರದವರು ಒಂದು ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ. ಮಾನ್ಯ ಶ್ರೀ ಯಡಿಯೂರಪ್ಪನವರ ಒತ್ತಡಕ್ಕೆ ಒಂದು ಕಾರಣವೇನೆಂದರೆ ಮಧ್ಯಪ್ರದೇಶ, ಸರ್ಕಾರ ಒಂದು ತೀರ್ಮಾನವನ್ನು ಈಗಾಗಲೇ ಮಾಡಿಬಿಟ್ಟಿರುವುದರಿಂದ ನಾವು ಕೂಡ ಏಕೆ ಮಾಡಬಾರದೆಂಬ ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ.

ಶ್ರೀ ಬಿ ಎಸ್. ಯಡಿಯೂರಪ್ಪ.—ಯು.ಪಿ. ಹಾಗೂ ಗುಜರಾತ್ ಸರ್ಕಾರಗಳು ಈ ಬಗ್ಗೆ ಹೊಸ ಯೋಜನೆಗಳನ್ನು ಮಾಡಿ ಕಳುಹಿಸಿಕೊಟ್ಟಿವೆ.

ಶ್ರೀ ಎಸ್. ಬಂಗಾರಪ್ಪ.—ಈಗಾಗಲೇ ಈ ವಿಚಾರದ ಬಗ್ಗೆ ಎರಡು ದಿವಸದಿಂದ ಸದನದಲ್ಲಿ ಚರ್ಚೆಯಾಗಿದೆ, ಹೊಸದಾಗಿ ಚರ್ಚೆ ಮಾಡತಕ್ಕ ಆವಶ್ಯಕತೆ ಏನೂ ಇಲ್ಲ. ಇಲ್ಲಿ ಈಗಾಗಲೇ ಚರ್ಚೆಯಾಗಿದೆ. ಹೊಸದಾಗಿ ಚರ್ಚೆ ಮಾಡುವುದು ಏನೂ ಉಳಿದಿಲ್ಲ, ಒಂದೊಂದು ರಾಜ್ಯ ಸರ್ಕಾರ ಒಂದೊಂದು ರೀತಿಯ ಚುನಾವಣೆ ಮಾಡತಕ್ಕ ಸಂದರ್ಭಗಳೂ ಕೂಡ ಇವೆ. ಈ ವಿಚಾರದಲ್ಲಿ ನಾವು ಇಂತಹ ಒಂದು ಸಂದರ್ಭದಲ್ಲಿ ನಾವು ಏನಾ ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗಬಹುದು ಹಾಗೂ ಹೊಸ ಒಂದು ತೀರ್ಮಾನ ಬೇರೆ ರಾಜ್ಯದಲ್ಲಿ ಉದ್ಭವವಾಗಿದ್ದರೆ ಅದನ್ನೂ ನಾವು ಗಮನಿಸಿ ನಾವು ತೀರ್ಮಾನ ಮಾಡಬೇಕಾದರೂ ಕೂಡ ನಮ್ಮ ರಾಜ್ಯ ಸರ್ಕಾರದ ಹಣಕಾಸಿನ ಒಂದು ವಿಚಾರ, ರೈತರ ಸಮಸ್ಯೆಗಳನ್ನು ಕೂಡ ಗಮನದಲ್ಲಿಟ್ಟುಕೊಂಡು ತೀರ್ಮಾನ ಮಾಡಬೇಕಾಗುತ್ತದೆ ಅದಕ್ಕೆ ನಾನು ಏನೂ ಹೇಳುತ್ತಿದ್ದೇನೆಂದರೆ, ಮತ್ತೊಂದು ಸಾರಿ ಈ ಬಗ್ಗೆ ಚರ್ಚೆ ಮಾಡಲು ಏನೇನೂ ಉಳಿದಿಲ್ಲ ನಾನು ಏನು ಅಭಿಪ್ರಾಯಪಡುತ್ತೇನೆಂದರೆ ಇನ್ನೊಂದು ಸಾರಿ ಚರ್ಚೆಯಾಗಬೇಕು ತಾವುಗಳು ಅಪೇಕ್ಷೆ ಪಟ್ಟರೆ ಅದಕ್ಕೆ ಅಧ್ಯಕ್ಷರು ಅವಕಾಶ ಕೊಟ್ಟರೆ We have no objection. ಆದರೆ ಅದರಿಂದ ಏನೂ ಉಪಯೋಗವಾಗುವುದಿಲ್ಲ. ಎಷ್ಟು ಸಾರ್ತಿ ಇದೇ ಭಾಷಣವನ್ನು ಮಾಡುವುದು.....

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ಹೇಳಿದಂತಹ ಮಾತಿನಿಂದ ವಾಪಸ್ಸು ಏಕೆ ಹೋಗುತ್ತೀರಿ ? ಈಗ ತಾನೆ ಸದನದ ನಾಯಕರಿದ್ದಾಗ ನಾಳೆ ಚರ್ಚೆ ಮಾಡೋಣ ಎಂದು ಹೇಳಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ಈ ವಿಷಯವನ್ನು ಪ್ರಸ್ತಾಪ ಮಾಡಿ ಮತ್ತೆ ಚರ್ಚೆ ಮಾಡಬೇಕೆಂಬುದೂ ತಮ್ಮ ಅಭಿಪ್ರಾಯ ವಾದರೆ ಅದು ಅಧ್ಯಕ್ಷರಿಗೆ ಬಿಟ್ಟಿರತಕ್ಕ ವಿಚಾರ.

ಅಧ್ಯಕ್ಷರು.—ನನಗೆ ಬಂದಿರತಕ್ಕ ತೊಂದರೆ ಏನಂದರೆ ಯಾವುದಾದರೂ ಬಂದು ವಿಚಾರದ ಬಗ್ಗೆ ಒಟ್ಟಾರೆ ಸಮ್ಮತಿ ಇದ್ದರೆ, ಸ್ವಲ್ಪ ನಾನೂ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಸುಲಭವಾಗುತ್ತದೆ. ಇಲ್ಲಿ ಭಿನ್ನ ಭಿನ್ನವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಒಬ್ಬರು ಆದರಿಂದ ಪ್ರಯೋಜನವಾಗುವುದಿಲ್ಲವೆಂದು ಹೇಳುತ್ತಾರೆ. ಶ್ರೀ ದೇಶಪಾಂಡೆಯವರು ಪ್ರಯೋಜನವಾಗುತ್ತದೆಂದು ಹೇಳುತ್ತಾರೆ ಪ್ರೊ॥ ನಂಜುಂಡಸ್ವಾಮಿಯವರು ಆಗುವುದಿಲ್ಲ ಇದರಿಂದ ೧೧೨೦ ಕೋಟಿರೂಪಾಯಿ ಉಳಿಯುತ್ತದೆಂದು ಹೇಳುತ್ತಾರೆ. ಆದ್ದರಿಂದ ತಾವು ಒಂದು ವಿಕಾಭಿಪ್ರಾಯಕ್ಕೆ ಬನ್ನಿ. ಆಪಕ್ಷಿತ ಪಕ್ಷದವರ ಅಭಿಪ್ರಾಯ ಬೇರೆ ಸಮ್ಮತಿಯ ವಿಕಾಭಿಪ್ರಾಯ ಮೂಡಿಬಂದರೆ ನಾನು ಏನಾದರೂ ತೀರ್ಮಾನ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ರೈತರ ಸಾಲ ಮನ್ನಾ ಆಗಬೇಕೆಂಬುದು ಎಲ್ಲರ ಅಭಿಪ್ರಾಯವಾಗಿದೆ.

ಶ್ರೀ ಪಾಟೀಲ್ ನಾಗರಾಜ್.—ತಾವು ಎಲ್ಲಾ ಪಕ್ಷಗಳ ಮುಂಖಂಡರನ್ನು ಕರೆಸಿ ಮಾತನಾಡಿ ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದು.

ಅಧ್ಯಕ್ಷರು.—ಈಗ ಅಧಿಕೃತವಾಗಿ ವಿರೋಧಪಕ್ಷದ ನಾಯಕರು ಮಾತನಾಡುತ್ತಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇರತಕ್ಕ ಸಮಸ್ಯೆ ಏಂದರೆ ನಮ್ಮ ನಾಲ್ಕು ಜನ ಮಾನ್ಯ ಸದಸ್ಯರುಗಳು ಮೂರು ದಿವಸಗಳಿಂದ ಧರಣಿಯನ್ನು ಮಾಡುತ್ತಿದ್ದಾರೆ ಈ ಸಮಸ್ಯೆಯನ್ನು ಬಗೆಹರಿಸಬೇಕೆಂಬುದು ನಮ್ಮ ಮುಂದೆ ಇರತಕ್ಕದ್ದು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಕೇಂದ್ರ ಸರ್ಕಾರವನ್ನು ಟೀಕೆ ಮಾಡಲಿಕ್ಕೆ ಕೆಲವು ಜನ ಪ್ರಯತ್ನ ಮಾಡಿದ್ದಾರೆ. ಅದನ್ನು ನಾವು ತಪ್ಪೆಂದು ಹೇಳುವುದಿಲ್ಲ. ಅವರಿಗೆ ಮಾತನಾಡಲಿಕ್ಕೆ ಸ್ವಾತಂತ್ರ್ಯ ಇದೆ. ಕೇಂದ್ರ ಸರ್ಕಾರದವರು ಮಾಡಿರತಕ್ಕ ಯೋಜನೆಯಲ್ಲಿ ಯಾರಿಗೂ ಉಪಯೋಗವಾಗುವುದಿಲ್ಲವೆಂದು ಕೆಲವರು ಹೇಳುತ್ತಿದ್ದಾರೆ. ಆದರೆ ಈ ಬಗ್ಗೆ ಇಡೀ ರಾಷ್ಟ್ರದಲ್ಲಿ ಮೊದಲನೆಯ ಸಲ ಒಂದು ಹೆಜ್ಜೆಯನ್ನು ಕೇಂದ್ರ ಸರ್ಕಾರ ಮುಂದಿಟ್ಟಿದೆ ಏಂದು ನಾವು ಹೇಳುತ್ತಿದ್ದೇವೆ ಈಗ ಅದರ ಮೆರಿಟ್ಸ್ ಮತ್ತು ಡಿಮೆರಿಟ್ಸ್ ಬಗ್ಗೆ ಚರ್ಚೆ ಮಾಡುವುದರಿಂದ ಏನೂ ಉಪಯೋಗವಾಗುವುದಿಲ್ಲ. ಶ್ರೀ ಯಡಿಯೂರಪ್ಪನವರು ಹೇಳಿದ ಹಾಗೆ ಮಹಾರಾಷ್ಟ್ರದಲ್ಲಿ ಇಪತ್ತು ಒಂದು ಹೇಳಿಕೆ ಕೊಟ್ಟಿದ್ದಾರೆ. ಗುಜರಾತ್‌ನಲ್ಲಿ ಪೊನ್ನೆ ಒಂದು ಹೇಳಿಕೆ ಕೊಟ್ಟಿದ್ದಾರೆ. ಮಧ್ಯಪ್ರದೇಶದಲ್ಲಿ ಒಂದು ಪ್ರಪೋಸಲ್ ಮಾಡಿದ್ದಾರೆ. ಇದರಲ್ಲಿ ಸತ್ಯಾಂಶ ಇರಬಹುದು. ಮಾನ್ಯ ಮುಖ್ಯಮಂತ್ರಿಯವರು ಇನ್ನೊಂದು ವಿಚಾರವನ್ನು ಹೇಳಿದರು. ನನಗೆ ಈಗಾಗಲೇ ನನ್ನ ಎದುರುಗಡೆ ಎಲ್ಲಾ ಅಂಕೆ ಸಂಖ್ಯೆಗಳು ಇಲ್ಲ. ಒಂದು ರಫ್ ಎಸ್ಟಿಮೇಟ್ ಪ್ರಕಾರ ಅನ್ನತಕ್ಕ ಮಾತನ್ನು ಸಹ ಹೇಳಿದ್ದಾರೆ. ವ್ಯಾಪಕವಾಗಿ ಚರ್ಚೆ ಮಾಡಿದ್ದೇವೆ. ಆದರೆ ಇನ್ನೂ ಹಲವಾರು ಅಂಶಗಳು ಕೆಲವು ವಿಸ್ತರ ಹತ್ತಿರ ಚರ್ಚೆ ಮಾಡಲಿಕ್ಕೆ ಇರಬಹುದು. ಆದ್ದರಿಂದ ನಾನು ಮಾನ್ಯ ಸದಸ್ಯರಲ್ಲಿ ವಿನಂತಿಪೂರ್ವಕವಾಗಿ ಕೇಳಿಕೊಂಡು ತಮಗೆ ಸಲಪೆ ಕೊಡುವುದೇನೆಂದರೆ, ಈಗ ಪರಿಸ್ಥಿತಿ ಬದಲಾವಣೆಯಾಗುತ್ತಿದೆ. ಕೇಂದ್ರ ಸರ್ಕಾರದವರು ೨-೩ ವಿಚಾರಗಳಲ್ಲಿ ಅವರು ಹಿಂದೆ ಏನು ಯೋಜನೆಗಳನ್ನು ಅನೌನ್ಸ್ ಮಾಡಿದ್ದರು. ಅದನ್ನು ಇನ್ನೂ ಕೆಲವು ಜನರಿಗೆ ಬೆನಿಫಿಟ್ ಆಗ ಬೇಕೆನ್ನುವ ದೃಷ್ಟಿಯಿಂದ ಮಾಡಿಫೈ ಮಾಡಿದ್ದಾರೆ. ಇದೆಲ್ಲವನ್ನೂ ನಾವು ಗವಂನದಲ್ಲಿಟ್ಟುಕೊಂಡು ಈ ಸದನದ ಹೊರಗಡೆ ನೀವು ಒಂದು ಪ್ರಯತ್ನವನ್ನು ಶನಿವಾರ ಮಾಡಿದ್ದೀರಿ ಆ ದಿನ ಇದೇ ರೀತಿ ಆಗ ಬೇಕು ಏಂದು ಮಾನ್ಯ ಯಡಿಯೂರಪ್ಪನವರು ಹೇಳಿದ್ದರೆ ನಾವು ಒಂದು ತೀರ್ಮಾನಕ್ಕೆ ಬರ ಬಹುದಾಗಿತ್ತು. ಅದು ಆಗಲಿಲ್ಲ, ಈಗ ದಯವಿಟ್ಟು ಈ ಪ್ರಯತ್ನವನ್ನು ಸದನದ ಹೊರಗಡೆ ಮಾಡಿ.

ಶ್ರೀ ಪಾಟೀಲ್ ನಾಗರಾಜ್.—ಮಾನ್ಯ ಅಧ್ಯಕ್ಷರೇ ಈ ಸದನದ ಎಲ್ಲಾ ಪಕ್ಷಗಳ ಮುಖಂಡರನ್ನು ಕರೆದು ಮಾತನಾಡಬೇಕೆಂದು ನಾನು ತಮ್ಮಲ್ಲಿ ಈಗಾಗಲೇ ಮನವಿ ಮಾಡಿಕೊಳ್ಳುತ್ತೇನೆ. ಬಹುಶಃ ಆಗ ಈ ಸಮಸ್ಯೆ ಬಗೆ ಹರಿಯಬಹುದೆಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು.—ಆಗಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ ನಾನು ತಮಗೆ ಒಂದು ಸಲಹೆ ಕೊಡುತ್ತೇನೆ. ನಮ್ಮ ಮುಂದೆ ಇರತಕ್ಕಂಥ ಸಮಸ್ಯೆ ಏನೆಂದರೆ, ಮಾನ್ಯ ಕೃಷಿ ಸಚಿವರು ಹೇಳಿದಂತೆ ಇದು ಚರ್ಚೆಯ ಒಂದು ಭಾಗ ಮಾತ್ರ ಆಗಿದೆ. ಕೇಂದ್ರ ಸರ್ಕಾರ ಏನೋಂದು ಪಾಲಿಸಿ ಮಾಡಿದೆ ಏನೋಂದು ಸ್ಟೇಟ್ ಪೆಂಟ್ ಮಾಡಿದೆ ಯಾವ ಒಂದು ಕಾರ್ಯ ಕ್ರಮ ರೂಪಿಸಿದೆ, ಯಾವ ಒಂದು ಸ್ಕೀಮ್‌ನ್ನು ಪ್ರೊಪೋಸ್ ಮಾಡಿದೆ, ಆದರಿಂದ ಏನೂ ಪ್ರಯೋಜನವಾಗುವುದಿಲ್ಲವೆನ್ನುವುದನ್ನು ನಾವೆಲ್ಲರೂ ಮನಗಂಡಿದ್ದೇವೆ. ವಿರೋಧಪಕ್ಷದ ಸದಸ್ಯರು ಸಹ ಈ ಸ್ಕೀಮ್‌ನಿಂದ ರೈತರಿಗೆ ಯಾವುದೇ ರೀತಿಯಂ ಲಾಭವಾಗುವುದಿಲ್ಲ ಏಂದು ಹೇಳುತ್ತಿದ್ದಾರೆ. ಅದಕ್ಕೆ ನಾವು ಒಂದು ಮಾತು ಹೇಳಿದಿರಿ, ಆದೇನೆಂದರೆ ವಿರೋಧಪಕ್ಷದವರೆಲ್ಲರೂ ಸೇರಿ ಒಂದು ಏಕಾಭಿಪ್ರಾಯವನ್ನು ರೂಪಿಸಿಕೊಂಡು ಈ ಸದನ ಮುಂದೆ ತಂದರೆ ಆಗ ಸದನ ಏನಾದರೊಂದು ತೀರ್ಮಾನ ತೆಗೆದುಕೊಳ್ಳಬಹುದ ಏಂದು.....

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ ವಿರೋಧ ಪಕ್ಷದವರು ಯೂನಿಟಿಯನ್ನು ಇವರಿಂದ ಕಲಿಯಬೇಕಾಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ ನಾನು ಏನು ಹೇಳಿದೆ...

ಶ್ರೀ ಪಿ. ಜಿ. ಆರ್. ಸಿಂಧ್ಯ.—ಏಕಾಭಿಪ್ರಾಯ ಅಂದ್ರೆ ಏನು ಅರ್ಥ ? ನೀವು ಇಲ್ಲಿ ಇದ್ದು ಎಲ್ಲಾ ನೋಡಿರಬಹುದು...

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ರೈತರ ಸಾಲ ಮನ್ನಾ ಆಗಬೇಕೆನ್ನುವುದರ ಬಗ್ಗೆ ವಿರೋಧ ಪಕ್ಷದವರಲ್ಲಿ ಯಾರಿಗೂ ಭಿನ್ನಾಭಿಪ್ರಾಯ ಇಲ್ಲ. ಒಟ್ಟಾರೆ ರೈತರ ಸಾಲ ಮನ್ನಾ

ಆಗಬೇಕಿನ್ನುವುದೇ ನಮ್ಮ ಮನಸ್ಸಿನಲ್ಲಿರುವುದು. ಕೇಂದ್ರ ಸರ್ಕಾರ ಏನೇ ಮಾಡಿರಲಿ. ಅವರು ಮಾಡಲಿ ಬಿಡಲಿ. ಅದು ಪ್ರಶ್ನೆ ಬೇರೆ. ರಾಜ್ಯ ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ ? ನಿಮ್ಮ ಯೋಜನೆ ಏನು ? ರಾಜ್ಯದ ಜನ ರೈತರು ನಿಮಗೆ ಓಟು ಕೊಟ್ಟಿಲ್ಲವೇನು ? ಕೇಂದ್ರ ಸರ್ಕಾರ ನಿಮಗೆ ದುಡ್ಡು ಕೊಡದಿದ್ದರೆ ರಾಜ್ಯ ಸರ್ಕಾರದ ಬೊಕ್ಕಸದಿಂದ ಹಣ ಕೊಡಿ. ನೀವೇ ಒಂದು ಹೊಸ ಯೋಜನೆಯನ್ನು ರೂಪಿಸಿ, ರೈತರ ಸಾಲ ಮನ್ನಾ ಮಾಡಿ. ರೈತರ ಸಾಲ ಮನ್ನಾ ಮಾಡುವ ಬಗ್ಗೆ ರಾಜ್ಯ ಸರ್ಕಾರದ ಕಳಕಳಿ ಏನು ? ನೀವು ಏನು ಯೋಜನೆ ಮಾಡಿದ್ದೀರಿ ? .....

(ಗೊಂದಲ)

ತಾವು ರೈತರ ಪರವಾದ ಕಾರ್ಯಕ್ರಮವೇನನ್ನು ರೂಪಿಸಿದ್ದೀರಿ ? ಮಾನ್ಯ ಮುಖ್ಯಮಂತ್ರಿಗಳು ವಿರೋಧಪಕ್ಷದವರು ಒಂದು ನಿಯೋಗ ತೆಗೆದುಕೊಂಡು ಹೋದರು. ಏನು ಮಾಡಿದರು. ನೀವಾದರೂ ಒಂದು ಹೊಸ ಯೋಜನೆಯನ್ನು ತಯಾರು ಮಾಡಿ ಅದನ್ನು ಸ್ಪಷ್ಟೀ ಮಾಡಿ ಯಾವ ರೀತಿ ಅನುಕೂಲವಾಗುತ್ತದೆ ಎನ್ನುವುದನ್ನು ಏನಾದರೂ ಯೋಚನೆ ಮಾಡಿದ್ದೀರಾ ? ಸರ್ಕಾರ ಅದಕ್ಕೆ ಸಿದ್ಧವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸಿಂಧ್ಯಾರವರು ನನ್ನ ಮಾತನ್ನು ತಪ್ಪಾಗಿ ಭಾವಿಸಿದಂತೆ ಕಾಣುತ್ತದೆ. ನಾನು ಹೇಳಿದ್ದು ಏನೆಂದರೆ ವಿರೋಧಪಕ್ಷದವರೆಲ್ಲರೂ ಒಟ್ಟಾಗಿ ಒಂದು ಏಕಾಭಿಪ್ರಾಯಕ್ಕೆ ಬನ್ನಿ ಎಂದೂ ಅಧ್ಯಕ್ಷರು ತಮಗೆ ಏನು ಹೇಳಿದರು ಅದನ್ನೇ ನಾನು ತಮಗೆ ಹೇಳಿದ್ದು. ಆ ಸಲಹೆಯನ್ನು ತಾವು ಸ್ವೀಕಾರ ಮಾಡಿದರೆ ತಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಸಿಗುತ್ತದೆ ಎನ್ನುವ ದೃಷ್ಟಿಯಿಂದ ನಾನು ಹೇಳಿದ್ದು. ನಾವು ಇಲ್ಲಿ ಯಾರೂ ಕೇಂದ್ರ ಸರ್ಕಾರವನ್ನು ದೂಷಣೆ ಮಾಡುತ್ತಿಲ್ಲ. ಮೊದಲನೆಯ ಬಾರಿಗೆ ಕೇಂದ್ರ ಸರ್ಕಾರ ರೈತರ ಪರವಾದ ಒಂದು ಸ್ಕೀಮ್ ಏನು ತಯಾರು ಮಾಡಿದೆ, ಅದರಲ್ಲಿ ಲೋಪ ಇದೆ ಎನ್ನುವ ಉದ್ದೇಶದಿಂದ ನಾವು ಈ ಮಾತನ್ನು ಹೇಳಿದೆವು. ಈ ಬಗ್ಗೆ ನಿಮ್ಮ ಉದ್ದೇಶ ಏನಿದೆ, ಅದು ಕಾರ್ಯ ಕ್ಷೇತ್ರದಲ್ಲಿ ಸಫಲ ಆಗುವುದಿಲ್ಲ ಆದ್ದರಿಂದ ಅದರಲ್ಲಿ ಸ್ವಲ್ಪ ಬದಲಾವಣೆ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ ಎನ್ನುವ ಬಗ್ಗೆ ಈ ಶಾಸನ ಸಭೆ ತನ್ನ ಅಭಿಪ್ರಾಯವನ್ನು ಕೊಡಲಿ ಎನ್ನುವುದರಲ್ಲಿ ತಪ್ಪೆನಿದೆ ? ನಾವು ಕೇಂದ್ರ ಸರ್ಕಾರವನ್ನು ಧೋಷಣೆ ಮಾಡತಕ್ಕಂಥಾದ್ದಕ್ಕೆ ಹೋಗಿಲ್ಲ. ಹಾಗೂ ವಿರೋಧ ಪಕ್ಷದವರಲ್ಲಿ ಒಡಕನ್ನು ಉಂಟು ಮಾಡುವುದು ನಮ್ಮ ಉದ್ದೇಶವಲ್ಲ. ಒಟ್ಟಿನಲ್ಲಿ ರೈತರ ಸಾಲ ಮನ್ನಾ ಆಗಬೇಕಿನ್ನುವುದೇ ನಮ್ಮ ಉದ್ದೇಶ ಆಗಿದೆ. ಆದರಪರವಾಗಿಯೇ ನಾವು ಮಾತನಾಡಂತ್ತಿದ್ದೇವೆ. ಆ ಬಗ್ಗೆ ನಾವೇತಕ್ಕೆ ಚರ್ಚೆ ಮಾಡಬಾರದಂ ಎನ್ನುವ ಉದ್ದೇಶದಿಂದ ನಾನು ಆ ಮಾತು ಹೇಳಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ನಾಳೆ ನಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡುತ್ತೀರಾ ? ಹೊಸ ಯೋಜನೆ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡುತ್ತೀರಾ ?

(ಗೊಂದಲ)

ಶ್ರೀ ಬನ್ನಿಕೋಡ್ ಬಸಪ್ಪ ಹನುಮಂತಪ್ಪ.—ಮಾನ್ಯ ಅಧ್ಯಕ್ಷರೇ ವಿರೋಧ ಪಕ್ಷದಲ್ಲಿರುವವರೆಲ್ಲರ ಅಭಿಪ್ರಾಯ ಒಂದೇ. ರೈತರಿಗೆ ಅನುಕೂಲವಾಗಲಿ ಎಂದು ಕೇಂದ್ರ ಸರ್ಕಾರ ಮೊದಲನೆಯ ಬಾರಿಗೆ ಒಂದು ಯೋಜನೆಯನ್ನು ತಯಾರು ಮಾಡಿದೆ. ಈ ಯೋಜನೆಯ ವಿಚಾರದಲ್ಲಿ ರಾಜ್ಯ ಸರ್ಕಾರದ ನಿಲುವು ಏನು ? ವಿರೋಧಪಕ್ಷದವರು ಒಗ್ಗಟ್ಟನ್ನು ಆಡಳಿತ ಪಕ್ಷದವರಿಂದ ಕಲಿಯಬೇಕಾಗಿಲ್ಲ.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ ಅವರ ಮಾತಿನ ಮೇಲೆ ನನ್ನ ದೊಂದು ಕ್ರಿಯಾಲೋಪ ಇದೆ.

ಅಧ್ಯಕ್ಷರು.—ಮಾತುಗಳ ಮೇಲೆ ಕ್ರಿಯಾಲೋಪ ಯಾವ ಅಸೆಂಬ್ಲಿಯಲ್ಲಿಯೂ ಇಲ್ಲ, ಕುಳಿತು ಕೊಳ್ಳಿ.

ಶ್ರೀ ಎಲ್. ಆರ್. ಶಿವರಾಮೆಗೌಡ.—ಮಾನ್ಯ ಅಧ್ಯಕ್ಷರೇ, ಈಗತಾನೆ ಅವರು ಹೇಳಿದರು ಆಡಳಿತ ಪಕ್ಷದ ಸದಸ್ಯರಿಂದ ನಾವು ಕಲಿಯಬೇಕಾಗಿಲ್ಲ ಎಂದು. ಅದು ರೆಕಾರ್ಡ್‌ಗೆ ಹೋಗಿದೆ. ರೈತರ ಪರವಾಗಿ ಆಡಳಿತ ಪಕ್ಷದವರು ಕೆಲಸ ಮಾಡುತ್ತಿಲ್ಲವೆಂದು ಹೇಳಿದ್ದಾರೆ. ಅದಕ್ಕೆ ನಾನು ಹೇಳುವುದೇನೆಂದರೆ, ರೈತರ ಪರವಾಗಿ ಇವರು ಕೆಲಸ ಮಾಡುತ್ತಿಲ್ಲ. ರೈತರ ಸಾಲ ಮನ್ನಾ ಮಾಡಲಿಕ್ಕೆ

ಇವರು ಪ್ರಯತ್ನ ಮಾಡಿರಬಹುದು, ಆದರೆ ಇವರು ಕೇಂದ್ರ ಸರ್ಕಾರದ ಪರವಾಗಿ ವಕಾಲತ್ತು ವಹಿಸಿ ಇಲ್ಲಿ ಗಲಾಟೆ ಮಾಡುತ್ತಿದ್ದಾರೆ. ಇದನ್ನು ಅವರು ಕೈ ಬಿಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂಬ ಒತ್ತಡವನ್ನು ಮಾನ್ಯ ಸದಸ್ಯರಾದ ಶ್ರೀ ಯಡಿಯೂರಪ್ಪನವರು ಕೇಳುತ್ತಿದ್ದಾರೆ. ಮತ್ತು ಇನ್ನೂ ಕೆಲವು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಈ ವಿಚಾರದಲ್ಲಿ ನಾವು ಹೇಳತಕ್ಕಂಥಾದ್ದು ಇಷ್ಟೆ, ಈಗಾಗಲೇ ನಾವು ಎರಡು ದಿವಸ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಹೊಸ ಸೂತ್ರ ಅಥವಾ ಮತ್ತೊಂದು ವಿಚಾರದಲ್ಲಿ ನೀವು ಎಷ್ಟೇ ಚರ್ಚೆ ಮಾಡಿದರೂ ಸಹ ಈ ಸದನದಲ್ಲಿ ಆಂಶಿಮ ನಿರ್ಣಯಕ್ಕೆ ಬರುವುದು ಕಷ್ಟವಾಗಬಹುದೆಂಬ ಒಂದು ಅಭಿಪ್ರಾಯ ಸಹ ಇದೆ. ಅದಕ್ಕೆ ತಮ್ಮ ಅಭಿಪ್ರಾಯವೂ ಕೂಡ ಅದೇ ರೀತಿ ಇದೆ ಎಂದು ನಾನು ಭಾವಿಸಿದ್ದೇನೆ, ಇವತ್ತು ತಮ್ಮನ್ನು ಬಿಟ್ಟು ಮಾಡಬೇಕೆನ್ನುವ ವಿಚಾರ ನಮ್ಮದಲ್ಲ. ಇವತ್ತು ಕರ್ನಾಟಕ ರಾಜ್ಯದ ರೈತರ ಸಾಲವು ರೈತರುಗಳಿಗೆ ಹೊರೆಯಾಗಿದೆ. ಅವರುಗಳಿಗೆ ಸಾಲ ಪಜಾ ಆಗಬೇಕೆನ್ನುವ ಅಭಿಪ್ರಾಯವನ್ನು ಇಟ್ಟುಕೊಂಡೇ ಮಾನ್ಯ ಮುಂಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಮಾನ್ಯ ಸಭ್ಯಾಧ್ಯಕ್ಷರೇ, ಇದರ ಬಗ್ಗೆ ಖಾಸಗಿ ಮಾನ್ಯ ಯಡಿಯೂರಪ್ಪನವರನ್ನು ಹಾಗೂ ರೈತ ಸಂಘದ ಮುಖಂಡರುಗಳನ್ನು, ವಿರೋಧ ಪಕ್ಷದ ನಾಯಕರುಗಳನ್ನು ಕರೆದು ಚರ್ಚೆ ಮಾಡಬಹುದು. ನಮ್ಮ ಕಡೆಯಿಂದ ಮುಖ್ಯ ಮಂತ್ರಿಗಳು ಇರುತ್ತಾರೆ. ಇಲ್ಲಿ ಚರ್ಚೆ ಮಾಡುವುದರಿಂದ ಉಪಯೋಗವಾಗಲಾರದೆಂದು ಮಾನ್ಯ ವಿರೋಧ ಪಕ್ಷದ ಉಪ ನಾಯಕರ ಅಭಿಪ್ರಾಯ ಸಹ ಆಗಿದೆ. ಅಂದರೆ ನಿಮಗೆ ಚರ್ಚೆ ಮಾಡಲು ಬರುವುದಿಲ್ಲ ಎಂದು ಅರ್ಥವಲ್ಲ. ನೀವು ಬಿರೀ ಬಾಷಣ ಮಾಡುವುದರಿಂದ...

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಬಂಗಾರಪ್ಪನವರು ಒಂದು ನಿಮಿಷ ಯೀಲ್ಡ್ ಆಗುವ ಹಾಗಿದ್ದರೆ ಒಂದು ವಿಚಾರ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಚರ್ಚೆ ಮಾಡುವುದರಿಂದ ಏನೂ ಉಪಯೋಗ ವಾಗುವುದಿಲ್ಲವೆಂದಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು ಸಹ ಕೇಂದ್ರ ಸರ್ಕಾರ ಮಾಡಿರುವ ಯೋಜನೆಯಿಂದ ಏನೂ ಉಪಯೋಗವುದಿಲ್ಲವೆಂದು ಹೇಳಿದ್ದಾರೆ. ಅವರು ಹೇಳಿರುವುದರಲ್ಲಿ ಯಾವುದು ಭಿನ್ನಾಭಿಪ್ರಾಯವಿಲ್ಲ, ಶೇಕಡ ೫೫ ಜನ ರೈತರುಗಳಿಗೆ ಅದರಿಂದ ಉಪಯೋಗವಾಗಬಹುದು. ಬಡವರುಗಳಿಗೆ ಇದರಿಂದ ಏನೂ ಉಪಯೋಗವಾಗುವುದಿಲ್ಲ. ಅದರಿಂದ ಸರ್ಕಾರವು ಇದರ ಬಗ್ಗೆ ಒಂದುರೆ ಸೆಲ್ಯೂಷನ್‌ನ್ನು ಪಾಸ್ ಮಾಡಿ ರೈತರುಗಳಿಗೆ ಯಾವುದೇ ರೀತಿಯು ಉಪಯೋಗವಾಗುವುದಿಲ್ಲವೆಂದು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು. ನಾವು ೧೭ ಜನ ಗೆದ್ದು ಬಂದಿದ್ದೇವೆ, ನಾವು ಕೇಂದ್ರ ಸರ್ಕಾರದ ಜೊತೆ ಚರ್ಚೆ ಮಾಡುವ ಅಗತ್ಯವಿಲ್ಲವೆಂದು ಹೇಳಿದರೆ, ನಾವು ನಮ್ಮ ಕಾರ್ಯಕ್ರಮಗಳನ್ನು ಜೇರೆ ತರಹದಲ್ಲಿ ರೂಪಿಸುತ್ತೇವೆ. ಕೇಂದ್ರ ಸರ್ಕಾರ ಮಾಡಿರುವ ಯೋಜನೆಯಿಂದ ಬಡ ರೈತನಿಗೆ ಯಾವುದೇ ರೀತಿಯ ಅನುಕೂಲವಾಗುವುದಿಲ್ಲ. ನಾವುಗಳೆಲ್ಲರೂ ಸೇರಿ ಚರ್ಚೆ ಮಾಡಿ ಈ ಯೋಜನೆಯು ಈ ರೀತಿ ಇದ್ದರೆ ಇದರಿಂದ ರೈತೆರಂಗಳಿಗೆ ಅನುಕೂಲವಾಗುತ್ತದೆಂದು ನಿರ್ಣಯ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸೋಣ. ಹಣಕಾಸಿನ ಸಹಾಯಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರುಗಳನ್ನು ಕರೆದುಕೊಂಡು ಪ್ರಧಾನಿಯವರ ಮನ ಒಲಿಸುವ ಕೆಲಸವನ್ನು ಮಾಡೋಣ. ಸನ್ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟ ತಕ್ಷಣ ಎಲ್ಲರೂ ಚಪ್ಪಾಳಿ ತಟ್ಟುವುದಲ್ಲ. ಈ ಯೋಜನೆಯಿಂದ ೧೨೦ ಕೋಟಿ ರೂಪಾಯಿಗಳ ಭಾರ ರಾಜ್ಯದ ಮೆಲೆ ಬೀಳುತ್ತದೆಂದು ಹೇಳುವುದಾದರೆ ಅದರ ವಿವರವನ್ನು ಕೊಡಿ. ಕೇಂದ್ರದ ೧೨೦ ಕೋಟಿ ಮತ್ತು ನಿಮ್ಮ ೧೨೦ ಕೋಟಿ ಬಗ್ಗೆ ವಿವರಗಳನ್ನು ಕೊಡಿ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಈ ವಿಚಾರದಲ್ಲಿ ಸಾಕಾದಷ್ಟು ಸಲಹೆಗಳನ್ನು ಕೇಳಿದ್ದೇನೆ. ಈಗ ಸದನವು ಮುಂದುವರಿದು ಮತ್ತೆ ಎರಡು ಗಂಟೆ ಐದು ನಿಮಿಷಕ್ಕೆ ಸಮಾವೇಶವಾಗುತ್ತದೆ.

(ಸದನವನ್ನು ೧ ಗಂಟೆ ೭ ನಿಮಿಷಕ್ಕೆ ಮುಂದೂಡಲಾಯಿತು.)

(೨ ಗಂಟೆ ೨೩ ನಿಮಿಷಕ್ಕೆ ಸದನ ಮತ್ತೆ ಸಮಾವೇಶಗೊಂಡಿತು. ಮಾನ್ಯ ಉಪಾಧ್ಯಕ್ಷಣಿಯವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಅಧ್ಯಕ್ಷ ಪೀಠದಲ್ಲಿದ್ದರು)

(ಬಿ.ಜೆ.ಪಿ. ಸದಸ್ಯರು ಧರಣಿ ಕುಳಿತಿದ್ದರು)

ಉಪಾಧ್ಯಕ್ಷರು.— ಈಗ ಗಘನ ಸೆಳೆಯುವ ಸೂಚನೆಗಳು. ಮೊದಲನೆಯದಾಗಿ ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ಎಲ್. ಆರ್. ಶಿವರಾಮೇಗೌಡ ಮತ್ತು ಟಿ. ಬಿ. ಜಯಚಂದ್ರ ಅವರುಗಳು ತೋಟಗಾರಿಕೆ ಮಂತ್ರಿಗಳ ಗಮನ ಸೆಳೆಯುವುದು...

ಶ್ರೀ ಕೆ. ಎಸ್. ಈಶ್ವರಪ್ಪ.— ಮಾನ್ಯ ಅಧ್ಯಕ್ಷರೇ, ರೈತರ ಸಾಲದ ಪಜಾ ಬಗ್ಗೆ ಬೆಳಿಗ್ಗೆ ಸಾಕಷ್ಟು ಚರ್ಚೆ ಆಗುತ್ತಿತ್ತು. ಕರ್ನಾಟಕ ರಾಜ್ಯದ ರೈತರ ಸಾಲದ ಬಗ್ಗೆ ಚರ್ಚೆಯಾಗುವಾಗ ಮಾನ್ಯ ಸಭಾಧ್ಯಕ್ಷರು ಕೂಡ ಇದ್ದರು. ಈ ಚರ್ಚೆ ಸಂದರ್ಭದಲ್ಲಿ...

ಒಬ್ಬರು ಮಾನ್ಯ ಸದಸ್ಯರು.— ಆ ಚರ್ಚೆ ಮುಗಿದಿದೆ.

ಉಪಾಧ್ಯಕ್ಷರು.— ನಾನು ಈಗ ಗಮನ ಸೆಳೆಯುವ ಸೂಚನೆಗೆ ಮೂರು ಜನರನ್ನು ಕರೆದಿದ್ದೇನೆ. ಶ್ರೀ ಎಲ್. ಆರ್. ಶಿವರಾಮೇಗೌಡರವರೇ, ನೀವು ಶುರು ಮಾಡಿ.

ಶ್ರೀ ಕೆ. ಎಸ್. ಈಶ್ವರಪ್ಪ.— ನಾನು ಇದನ್ನು ಪ್ರತಿಭಟನೆ ಮಾಡಿ ಧರಣಿಯನ್ನು ಮುಂದುವರೆಸುತ್ತೇನೆ.

(ಮಾನ್ಯ ಸದಸ್ಯರು ಧರಣಿ ಕುಳಿತಿದ್ದ ಬಿ.ಜೆ.ಪಿ. ಸದಸ್ಯರೊಡನೆ ಸೇರಿಕೊಂಡರು)

ಗಮನ ಸೆಳೆಯುವ ಸೂಚನೆಗಳು

(i) ರಾಜ್ಯದಲ್ಲಿ ಕೊಬ್ಬರಿ ಧಾರಣೆ ಅತ್ಯಂತ ಕನಿಷ್ಟ ಮಟ್ಟಕ್ಕೆ ತಲುಪಿರುವುದರಿಂದ ತೆಂಗು ಬೆಳೆಗಾರರಿಗೆ ತೊಂದರೆ

ಶ್ರೀ ಎಲ್. ಆರ್. ಶಿವರಾಮೇಗೌಡ.— ಮಾನ್ಯ ಉಪಾಧ್ಯಕ್ಷರೇ, ರಾಜ್ಯದಲ್ಲಿ ಕೊಬ್ಬರಿ ಧಾರಣೆ ಕನಿಷ್ಟ ಮಟ್ಟಕ್ಕೆ ತಲುಪಿರುವುದರಿಂದ ತೆಂಗು ಬೆಳೆಗಾರರಿಗೆ ತೊಂದರೆ ಉಂಟಾಗಿರುವ ಬಗ್ಗೆ ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಕೃಷಿ ಮಂತ್ರಿ ಮತ್ತು ತೋಟಗಾರಿಕೆ ಸಚಿವರು).— ಮಾನ್ಯ ಉಪಾಧ್ಯಕ್ಷರೇ, ನಾನು ಈ ರೀತಿಯಾಗಿ ಸ್ಟೇಟ್‌ಮೆಂಟ್ ಮಾಡುತ್ತೇನೆ.

ರಾಜ್ಯದಲ್ಲಿ ಕೊಬ್ಬರಿಯ ಬೆಲೆಯು ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ರಾಜ್ಯ ಸರ್ಕಾರವು ೧೯೯೯-೨೦೦೦ ಸಾಲಿನಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ, ಕೊಬ್ಬರಿಗೆ ಬೆಂಬಲ ಬೆಲೆಯನ್ನು ನಿಗಧಿಪಡಿಸಲು ಕೋರಿಕೊಂಡಿದೆ. ೧೯೯೦ನೇ ಸಾಲಿನಲ್ಲಿ ಸಂಭವಿಸಿದ ಏರುಪೇರುಗಳನ್ನು ಗಮನಿಸಿ, ರಾಜ್ಯಸರ್ಕಾರವು ಬೆಂಬಲ ಬೆಲೆಯನ್ನು ಪರಿಷ್ಕರಿಸಲು ಭಾರತ ಸರ್ಕಾರಕ್ಕೆ ವರದಿ ಸಲ್ಲಿಸಿತು. ಆ ನಂತರ ಭಾರತ ಸರ್ಕಾರವು ೧೯೯೦ ಫೆಬ್ರುವರಿಯಲ್ಲಿ ಬೆಂಬಲ ಬೆಲೆಯನ್ನು ಸಿ.ಎ.ಪಿ.ಸಿ. ಸಂಸ್ಥೆಯ ಶಿಫಾರಸ್ಸಿನ ಮೇರೆಗೆ ರೂ. ೧೬೦೦ ಗಳಿಗೆ ಏರಿಸಿತು.

ರಾಜ್ಯದಲ್ಲಿ ಕೊಬ್ಬರಿ ಬೆಲೆಯೂ ಬೆಂಬಲ ಬೆಲೆಗಿಂತಲೂ ಕಡಿಮೆಯಾದಾಗ, ಕೊಬ್ಬರಿಯನ್ನು ಕೊಂಡು ಕೊಳ್ಳಲು ಕೇಂದ್ರ ಸರ್ಕಾರದಿಂದ ಸ್ಥಾಪನೆಯಾದ ''ನಾಫೆಡ್'' ಸಂಸ್ಥೆಯನ್ನು ಈ ಕಾರ್ಯಕ್ಕೆ ನಿಯೋಜಿಸಲಾಗಿದೆ. ಈ ಸಂಸ್ಥೆಯು ಈಗ ಚಾಲ್ತಿಯಲ್ಲಿರುವ ಬೆಂಬಲ ಬೆಲೆಯಂತೆ, ಎಫ್.ಎ.ಕ್ಯೂ. ಕೊಬ್ಬರಿಗೆ ಕ್ವಿಂಟಾಲ್ ಒಂದಕ್ಕೆ ರೂ. ೧೬೦೦ ಮತ್ತು ಎಫ್.ಎ.ಕ್ಯೂ.ಗಿಂತ ಒಂದು ಹಂತ ಕಡಿಮೆಯಾದ ಕೊಬ್ಬರಿಗೆ ಕ್ವಿಂಟಾಲ್ ಒಂದಕ್ಕೆ ರೂ. ೧೫೫೦ರಂತೆ ಕೊಳ್ಳಬಹುದಾಗಿದೆ. ಈ ಸಂಸ್ಥೆಯು ಮಂಗಳೂರು ಕೆ.ಎಸ್.ಸಿ.ಎಂ.ಎಫ್. ಮತ್ತು ಎಸ್.ಕೆ.ಎ.ಸಿ.ಎಂ.ಎಸ್. ನಿಂದ ಸುಮಾರು ೬೦೩ ಕ್ವಿಂಟಾಲ್ ಕೊಬ್ಬರಿಯನ್ನು ಮಾರ್ಚ್ ಮತ್ತು ಮೇ ೧೯೯೯ರ ಅವಧಿಯಲ್ಲಿ ಕೊಂಡಿರುತ್ತದೆ.

೧೯೯೯ ಅವಧಿಯಲ್ಲಿ ವಾತಾವರಣದ ತೇವಾಂಶ ಮತ್ತು ಉಷ್ಣತೆ ಕನಿಷ್ಟಕ್ಕಿಂತಲೂ ಕಡಿಮೆ ಇದ್ದು, ತೆಂಗು ಬೆಳೆಯ ಮೇಲೆ ವ್ಯಾಪಕ ಪರಿಣಾಮ ಬೀರಿತು. ಈ ಬಗ್ಗೆ ಸಮೀಕ್ಷೆ ನಡೆಸಲು ಕೃಷಿ ವಿಶ್ವವಿದ್ಯಾಲಯ ತಜ್ಞರು, ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ ಮತ್ತು ಇಲಾಖಾ ಅಧಿಕಾರಿಗಳ ತಂಡವು ರೋಗ ತಗುಲಿದ ಪ್ರದೇಶದಲ್ಲಿ ವ್ಯಾಪಕ ಸಮೀಕ್ಷೆ ನಡೆಸಿ ರೈತರಿಗೆ ಸೂಕ್ತ ಸಲಹೆ ನೀಡಿದೆ. ಈ ಬಗ್ಗೆ ಹಸ್ತಪ್ರತಿಗಳನ್ನು ಕೂಡ ಹಂಚಲಾಗಿದೆ, ಮತ್ತು ಆಕಾಶವಾಣಿ ಮೂಲಕ ಅನುಸರಿಸಬೇಕಾದ ಕಾರ್ಯಕ್ರಮಗಳನ್ನು ಬಿತ್ತರಿಸಲಾಗಿದೆ. ಈಗ ತೆಂಗಿನ ತೋಟಗಳು ಚೇತರಿಸಿಕೊಂಡು ಮಾಮೂಲಿ ಹಂತಕ್ಕೆ ಬರುತ್ತಿವೆ.

† ಶ್ರೀ ಎಲ್. ಆರ್. ಶಿವರಾಮೇಗೌಡ.— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕೃಷಿ ಮಂತ್ರಿಗಳು ಈ ಒಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಒಂದು ವಿಚಾರವನ್ನು ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯಬೇಕಾಗಿರುತ್ತದೆ. ಕಳೆದ ಒಂದು ವರ್ಷದ ಹಿಂದೆ ಕೊಬ್ಬರಿ ಬೆಲೆ ಕ್ವಿಂಟಾಲ್‌ಗೆ